ನೇಮಿಚಂದ್ರ ಅವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆ

ಕನ್ನಡ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ
ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಅಂತಿಮ ಸಂಶೋಧನಾ ಸಾರಲೇಖ

ಸುಚಿತ್ರ ಕೆ. ಎಲ್.
ಸಂಶೋಧನಾರ್ಥಿ

ಡಾ. ಧನಂಜಯ ಕುಂಬ್ಳೆ
ಮಾರ್ಗದರ್ಶಕರು

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ, ಮಂಗಳೂರು.

2025

ನೇಮಿಚಂದ್ರ ಅವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆ

ಪರಿವಿಡಿ

ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ, ಮಹತ್ವ, ಸಾಹಿತ್ಯ ಸಮೀಕ್ಷೆ

ಅಧ್ಯಾಯ – ಒಂದು
ಸ್ತ್ರೀ ಸಂವೇದನೆಯ ತಾತ್ವಿಕತೆಯ ಸ್ವರೂಪ

1.1 ಸಂವೇದನೆಯ ಅರ್ಥ ಮತ್ತು ವ್ಯಾಖ್ಯಾನ

1.2 ಸ್ತ್ರೀ ಸಂವೇದನೆಯ ವೈಶಿಷ್ಟ್ಯಗಳು

1.3 ಜಾಗತಿಕ ಸಾಹಿತ್ಯ : ಮಹಿಳಾ ಸಂವೇದನೆ

1.4 ಕನ್ನಡ ಸಾಹಿತ್ಯ : ಮಹಿಳಾ ಸಂವೇದನೆ

1.4.1 ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

1.4.2 ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

1.4.3 ಜಾನಪದ ಸಾಹಿತ್ಯದಲ್ಲಿ ಮಹಿಳಾ ಸಂವೇದನೆ

1.5 ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

1.6 ಸ್ತ್ರೀವಾದದ ಉಗಮ ಮತ್ತು ಬೆಳವಣಿಗೆ

1.7 ಕನ್ನಡದ ಸಮಕಾಲೀನ ಲೇಖಕಿಯರ ಬರಹಗಳಲ್ಲಿ ಸ್ತ್ರೀ ಸಂವೇದನೆ

ಅಧ್ಯಾಯ – ಎರಡು
ನೇಮಿಚಂದ್ರ ಅವರ ಬದುಕು ಮತ್ತು ಬರಹ

2.1 ಬಾಲ್ಯ – ವಿದ್ಯಾಭ್ಯಾಸ

2.2 ಕೌಟುಂಬಿಕ ಪರಿಸರದಿಂದ ಪಡೆದ ಪ್ರೇರಣೆ

2.3 ವೈಯಕ್ತಿಕ ಬದುಕು

2.4 ಸಾಹಿತ್ಯ ಕ್ಷೇತ್ರ

2.4.1 ಕತೆಗಳು

2.4.2 ಕಾದಂಬರಿಗಳು

2.4.3 ಪ್ರವಾಸ ಸಾಹಿತ್ಯ

2.4.4 ಜೀವನ ಚರಿತ್ರೆ

2.4.5 ಸಂಪಾದನೆ

2.4.6 ಅಂಕಣ ಬರಹಗಳು

ಅಧ್ಯಾಯ – ಮೂರು

ನೇಮಿಚಂದ್ರ ಅವರ ಕಥಾ ಸಾಹಿತ್ಯ ಮತ್ತು ಕಾದಂಬರಿ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

3.1. ಆಧುನಿಕತೆಯ ವಿನ್ಯಾಸ

3.2. ಸ್ವಾವಲಂಬನೆಯ ವಿನ್ಯಾಸ

3.3. ಆಧುನಿಕ ಬದುಕಿನ ವಿಪರ್ಯಾಸ

3.4. ಸಾಂಸ್ಕೃತಿಕ ವಿನ್ಯಾಸ

3.5. ಕಥನ ಶೈಲಿಯ ವಿನ್ಯಾಸ

3.5.1 'ಯಾದ್ ವಶೇಮ್' ಕಾದಂಬರಿಯಲ್ಲಿ ಸ್ತ್ರೀ ಸಂವೇದನೆಯ ನೆಲೆ

3.6 ನೇಮಿಚಂದ್ರರ ಕಥಾ ಸಾಹಿತ್ಯ– ಸಮಕಾಲೀನರ ಜೊತೆ ತುಲನಾತ್ಮಕ ಅಧ್ಯಯನ

ಅಧ್ಯಾಯ–ನಾಲ್ಕು

ನೇಮಿಚಂದ್ರ ಅವರ ಪ್ರವಾಸ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆ

4.1 ಕನ್ನಡದಲ್ಲಿ ಮಹಿಳಾ ಪ್ರವಾಸ ಸಾಹಿತ್ಯ

4.2 ಒಂದು ಕನಸಿನ ಪಯಣ ಪ್ರವಾಸ ಕಥನ

4.3 ಪೆರುವಿನ ಪವಿತ್ರ ಕಣಿವೆಯಲ್ಲಿ ಪ್ರವಾಸ ಸಾಹಿತ್ಯ

4.4 ನೇಮಿಚಂದ್ರರ ಪ್ರವಾಸ ಸಾಹಿತ್ಯ – ಸಮಕಾಲೀನರ ಜೊತೆ ತುಲನಾತ್ಮಕ ಅಧ್ಯಯನ

ಅಧ್ಯಾಯ–ಐದು

ಜೀವನ ಚರಿತ್ರೆ ಸಾಹಿತ್ಯಕ್ಕೆ ನೇಮಿಚಂದ್ರ ಅವರ ಕೊಡುಗೆ

5.1 ಜೀವನ ಚರಿತ್ರೆ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

5.2 ಮಹಿಳೆಯರ ಕುರಿತಾದ ಜೀವನ ಚರಿತ್ರೆ

5.3 ಹೋರಾಟದ ಹಾದಿಯಲ್ಲಿ ಧೀರ ಮಹಿಳೆಯರು

5.4 ಮಹಿಳಾ ವಿಜ್ಞಾನಿಗಳು

5.5 ಮಹಿಳಾ ವೈಮಾನಿಕರು

5.6 ಭಾರತದ ಮಹಿಳಾ ವೈದ್ಯರು

ಅಧ್ಯಾಯ–ಆರು
ನೇಮಿಚಂದ್ರ ಅವರ ಅಂಕಣ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ

6.1 ಅಂಕಣ ಸಾಹಿತ್ಯ

6.2 ಕನ್ನಡದಲ್ಲಿ ಅಂಕಣ ಸಾಹಿತ್ಯ

6.3 ಮಹಿಳೆಯರ ಅಂಕಣ ಸಾಹಿತ್ಯ

6.4 ನೇಮಿಚಂದ್ರ ಅವರ ಅಂಕಣ ಬರಹಗಳು

6.4.1 ಮಹಿಳೆ ಮತ್ತು ಆರೋಗ್ಯ ಕುರಿತ ಬರಹಗಳು

6.4.2 ಸಾಮಾಜಿಕ ಚಿಂತನೆಯುಳ್ಳ ಬರಹಗಳು

6.4.3 ಜೀವನೋತ್ಸಾಹ ತುಂಬುವ ಬರಹಗಳು

6.5 ಅಂಕಣ ಸಾಹಿತ್ಯ – ಸಮಕಾಲೀನರ ಜೊತೆ ತುಲನಾತ್ಮಕ ನೋಟ

ಸಮಾರೋಪ

❖ ಅಧ್ಯಯನದ ಫಲಿತಗಳು

❖ ಮುಂದಿನ ಅಧ್ಯಯನದ ಸಾಧ್ಯತೆಗಳು

❖ ನೇಮಿಚಂದ್ರ ಅವರ ಸಾಹಿತ್ಯದ ಒಟ್ಟು ಆಶಯ

ಅನುಬಂಧಗಳು
ಅನುಬಂಧ – 1

(ಅ) ಪ್ರಾಥಮಿಕ ಆಕರಗಳು

(ಆ) ಪರಾಮರ್ಶನ ಗ್ರಂಥಗಳು

(ಇ) ಸಮ್ಮೇಳನ ಗ್ರಂಥಗಳ ಲೇಖನಗಳು

(ಈ) ಸಂಶೋಧನ ಲೇಖನಗಳು

(ಉ) ದಿನಪತ್ರಿಕೆ ಮತ್ತು ನಿಯತ ಕಾಲಿಕೆಗಳ ಲೇಖನಗಳು

(ಊ) ಮಹಾಪ್ರಬಂಧಗಳು

(ಋ) ಎಮ್.ಫಿಲ್. ನಿಬಂಧನೆಗಳು

(ಎ) ಅಂತರ್ಜಾಲದ ಮಾಹಿತಿಗಳು

ಅನುಬಂಧ – 2

ನೇಮಿಚಂದ್ರ ಅವರ ಬದುಕಿನ ಹೆಜ್ಜೆಗಳು

ಅನುಬಂಧ – 3

ನೇಮಿಚಂದ್ರ ಅವರಿಗೆ ಸಂದಿರುವ ಗೌರವ ಮತ್ತು ಪುರಸ್ಕಾರಗಳು

ಅನುಬಂಧ – 4

ಅಧ್ಯಯನಕ್ಕೆ ಸಂಬಂಧಿಸಿದ ಛಾಯಾಚಿತ್ರಗಳು

ನೇಮಿಚಂದ್ರ ಅವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆ

1. ಪ್ರಸ್ತಾವನೆ

ಸಾಹಿತ್ಯವು ನಿಂತ ನೀರಲ್ಲ. ಅದು ಸದಾ ಹರಿಯುವ ನದಿಯಂತೆ ಎಂದು ಹೇಳಬಹುದು. ಸಾಹಿತ್ಯವು ತನ್ನದೇ ಆದ ನೆಲೆಗಟ್ಟಿನಲ್ಲಿ ವಿಭಿನ್ನ ನೆಲೆಯಲ್ಲಿ ಬೆಳವಣಿಗೆಯನ್ನು ಹೊಂದದಿದ್ದರೆ ಪ್ರಸ್ತುತ ಯಾವುದೇ ಲೇಖಕರಾಗಲಿ, ಲೇಖಕಿಯರಾಗಲಿ ಕಾಣಿಸಿಕೊಳ್ಳುತ್ತಿರಲಿಲ್ಲ. ಪಿತೃ ಪ್ರಾಧಾನ್ಯತೆಯ ನೆಲೆಯಲ್ಲಿ ಹೆಣ್ಣು ಸೂತ್ರದ ಬೊಂಬೆಯಂತೆ ತನ್ನ ಜೀವನ ನಿರ್ವಹಣೆಯನ್ನು ನಿಭಾಯಿಸುತ್ತಾ ಪುರುಷನ ಸಂಕೋಲೆಗಳಿಂದ ಹಂತ–ಹಂತವಾಗಿ ಬಿಡುಗಡೆಗೊಳ್ಳುತ್ತ ಸಾಹಿತ್ಯದಲ್ಲಿ ಹಾಗೂ ಇತರೆ ಎಲ್ಲಾ ಕ್ಷೇತ್ರದಲ್ಲೂ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡಿದ್ದಾರೆ. ಬದುಕು ಸಾಹಿತ್ಯದ ಬೇರು. ಸಾಹಿತ್ಯದ ಸ್ವರೂಪ ಕಥೆ, ಕಾದಂಬರಿ, ಕವಿತೆ, ನಾಟಕ, ಪ್ರಬಂಧ ಯಾವುದೇ ಆಗಿರಲಿ ಅದು ಅನುಭವಗಳ ಅಭಿವ್ಯಕ್ತಿಯ ಮಾಧ್ಯಮವಾಗಿದೆ. ವಾಸ್ತವಿಕ ಅನುಭವಗಳ ಅಭಿವ್ಯಕ್ತಿಯೇ ಸಾಹಿತ್ಯದ ಗುರಿಯಾಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯು ಭಿನ್ನ ನೆಲೆಗಳಲ್ಲಿ ಬೆಳೆದು ಬಂದಿದೆ. ಕನ್ನಡ ಸಾಹಿತ್ಯದ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಈ ನಾಲ್ಕು ಕಾಲಘಟ್ಟಗಳ ಸಂದರ್ಭದಲ್ಲಿ ಮಹಿಳೆಯರನ್ನು ಪಿತೃಪ್ರಭುತ್ವ ಸಂಪ್ರದಾಯ, ಧರ್ಮ, ಸಂಬಂಧ, ಕೌಟುಂಬಿಕ, ಲೈಂಗಿಕತೆ, ಜಮಿನ್ದಾರಿ ವ್ಯವಸ್ಥೆಯ ಕೌರ್ಯ, ಬಂಡವಾಳಶಾಹಿ ವ್ಯವಸ್ಥೆ, ಬಡತನ, ಅಸಹಾಯಕತೆ, ಜಾತಿಸಂಕೋಲೆಗಳ ಏಣಿ–ಶ್ರೇಣಿ ವ್ಯವಸ್ಥೆಯೊಳಗೆ ರೂಪಿಸಿಕೊಂಡಿರುವ ಸಂಗತಿಗಳೊಂದಿಗೆ, ಮಹಿಳಾ ಸಂವೇದನೆ ಮುಖಾಮುಖಿ ಆಗಿರುವುದನ್ನು ಕಾಣಬಹುದಾಗಿದೆ.

ಯಾವುದೇ ಲೇಖಕರ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಿದರೆ, ಆ ಅಧ್ಯಯನದಲ್ಲಿ ಲೇಖಕರ ಪಾಂಡಿತ್ಯ, ಬರಹ ಶೈಲಿ, ಸೃಜನಶೀಲತೆ, ಸಂವೇದನಾಶೀಲತೆ, ಸಕರಾತ್ಮಕತೆ, ಸರಳತೆ, ಸಂಕ್ಷಿಪ್ತತೆ, ಸೂಕ್ಷ್ಮತೆ, ವೈಜ್ಞಾನಿಕತೆ, ಲೇಖಕರ ಅಭಿರುಚಿ, ಗ್ರಹಿಕೆ, ಓದುಗರನ್ನು ಹಿಡಿದಿಡುವ, ಕುತೂಹಲಕ್ಕೆ ಕೊಂಡೊಯ್ಯುವ ಜಾಣ್ಮೆ, ಪ್ರಬುದ್ಧತೆ, ಹೃದಯ ವೈಶಾಲ್ಯತೆ, ವಿಚಾರಧಾರೆ, ಒಂದು ವಿಷಯದ ಜೊತೆ ಮತ್ತೊಂದು ವಿಷಯದ ಅರ್ಥಪೂರ್ಣವಾದ ತುಲನಾತ್ಮಕತೆ, ಸಮತೋಲನ, ವಸ್ತುನಿಷ್ಠತೆ, ಪಾತ್ರ ಚಿತ್ರಣ, ಪರಿಪೂರ್ಣತೆ, ನೈಪುಣ್ಯತೆ, ಕೃತಿಗಳನ್ನು ರಚಿಸುವಲ್ಲಿನ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು, ಔಚಿತ್ಯ, ಮಾನವೀಯತೆ, ಮಾನಸಿಕ ಸ್ಥೈರ್ಯ, ಪ್ರಬುದ್ಧ ಜೀವನ ದೃಷ್ಟಿ, ಸ್ಥಿರತೆ, ವ್ಯಕ್ತಿತ್ವ ವಿಕಸನ, ಕಥಾವಸ್ತುವಿನ ಸ್ಥಳದ ಜನರ ಜೀವನ ಶೈಲಿ, ಸಹಜತೆ, ಸ್ತ್ರೀಬದ್ಧತೆ, ಸ್ವಾವಲಂಬನೆ, ಸಾಧನೆ, ಆತ್ಮವಿಶ್ವಾಸ, ಸಮಾಜದ ಕಟ್ಟುಪಾಡುಗಳ ಖಂಡಿಸುವಿಕೆ, ಜೀವನೋತ್ಸಾಹ,

ಸೋಲುವಾಗಲೂ ಜೀವನದ ಮೇಲಿನ ಭರವಸೆ, ಆಧುನಿಕ ಸಾಹಿತ್ಯದೊಡನೆ ಪಾಶ್ಚಿಮಾತ್ಯ ಸಾಹಿತ್ಯದ ಪ್ರೇರಣೆ, ಒಲವು, ಬದುಕು ಮುಗಿಯದ ಪಯಣ, ಸುಖ, ದುಃಖ, ನೋವು, ನಲಿವು, ನಿರಾಶೆ, ಅಪಮಾನ, ದಿಟ್ಟತನ, ಛಲ, ಹೆಣ್ಣಿನ ಶೋಷಣೆ, ದಬ್ಬಾಳಿಕೆ, ಲಿಂಗ ಅಸಮಾನತೆ, ಮಹಿಳಾ ಹಕ್ಕು ಜಾಗೃತಿ, ಒಂದು ಕಾಲಘಟ್ಟದಲ್ಲಿರುವ ಸಮಾಜದ ಮಹಿಳಾ ಧೋರಣೆ, ಏನನ್ನಾದರೂ ಸಾಧಿಸುವ ಹಂಬಲ, ನಾವಿನ್ಯತೆ, ಕೃತಿಯನ್ನು ರಚಿಸುವಲ್ಲಿನ ಪ್ರವಾಸ, ಆದರ್ಶಪ್ರಾಯತ್ವ, ಸಾಮಾಜಿಕ ಚಿಂತನೆಗಳು ಅನಾವರಣಗೊಳ್ಳುತ್ತವೆ. ಈ ಮೇಲಿನ ಎಲ್ಲಾ ಗುಣಗಳು ನೇಮಿಚಂದ್ರರವರ ಕೃತಿಗಳಲ್ಲಿ ಹೆಚ್ಚಾಗಿ ಅಡಕವಾಗಿವೆ.

ಕನ್ನಡ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದ ಲೇಖಕಿಯರಲ್ಲಿ ನೇಮಿಚಂದ್ರರವರು ಪ್ರಮುಖರು. ಅವರು ತಮ್ಮ ಕತೆಗಳು, ಕಾದಂಬರಿಗಳು, ಜೀವನಚರಿತ್ರೆಗಳು ಮತ್ತು ಚಿಂತನಾತ್ಮಕ ಲೇಖನಗಳ ಮೂಲಕ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ. ಕನ್ನಡ ಸಾಹಿತ್ಯ ಲೋಕಕ್ಕೆ ಅವರು ಕೊಟ್ಟಂತಹ ಕೊಡುಗೆಗಳಲ್ಲಿ ಸಾಮಾಜಿಕ ಚಿಂತನೆಯ ಕತೆಗಳು, ಜೀವನವನ್ನು ಆಧರಿಸಿದ ಕತೆಗಳ ಮೂಲಕ ಜನರ ಮೆಚ್ಚುಗೆಗೆ ಪಾತ್ರರಾದವರು. ನೇಮಿಚಂದ್ರರವರ ಸೃಜನಶೀಲ ಬರಹಗಳು ಸಮಾಜದ ಸಾಮಾನ್ಯ ವ್ಯಕ್ತಿಗಳ ಜೀವನ, ಮಹಿಳಾ ಸಂವೇದನೆ ಮತ್ತು ಮನೋವಿಜ್ಞಾನದ ಅಂಶಗಳನ್ನು ತುಂಬಾ ಪ್ರಭಾವಕಾರಿಯಾಗಿ ಚಿತ್ರಿಸಿದ್ದಾರೆ. ಅವರ ಪ್ರಮುಖ ಕೃತಿಗಳು ಪ್ರಸ್ತುತ ಸಮಸ್ಯೆಗಳನ್ನು ವಿವರಿಸುವ ಜಾಣ್ಮೆಯನ್ನು ಹೊಂದಿದ್ದು, ಅವರನ್ನು ಕನ್ನಡ ಸಾಹಿತ್ಯ ಲೋಕದಲ್ಲಿ ಮೇರು ಶಿಖರಕ್ಕೇರಿಸಿವೆ. ಸಾಂಸ್ಕೃತಿಕ, ಸಾಮಾಜಿಕ ಮತ್ತು ಮೌಖಿಕ ಚಿಂತನೆಗಳನ್ನು ಅವರು ತಮ್ಮ ಬರಹದಲ್ಲಿ ಸಮರ್ಥವಾಗಿ ಹೊಂದಿಸಿಕೊಂಡಿದ್ದಾರೆ. ಅದಷ್ಟೇ ಅಲ್ಲದೇ ನೇಮಿಚಂದ್ರರವರು ಮಾಡಿರುವ ಸಾಹಿತ್ಯ ಕೃಷಿಯು ವಿಜ್ಞಾನ, ಮನೋವಿಜ್ಞಾನ, ಮಹಿಳಾ ಅಧ್ಯಯನ, ಸಮಾಜಶಾಸ್ತ್ರ ಮತ್ತು ಮಾನವೀಯತೆಯ ಸಂಗಮವಾಗಿದೆ. ಅವರ ಕೃತಿಗಳನ್ನು ಓದಿದ ಓದುಗರಿಗೆ ಆಳವಾದ ಚಿಂತನೆಗೆ ದಾರಿ ಮಾಡಿಕೊಡುತ್ತವೆ. ಅಷ್ಟೊಂದು ಆಳವಾಗಿ ಓದುಗರ ನಾಡಿ ಮಿಡಿತವನ್ನು ಬಲ್ಲವರಂತೆ ಬಹಳ ಗಂಭೀರವಾದ ವಿಷಯಗಳನ್ನು ಬರೆಯುವಲ್ಲಿ ಇವರು ಸದಾ ಮುಂದು.

2. ಅಧ್ಯಯನದ ಉದ್ದೇಶ

ಆಧುನಿಕ ಕನ್ನಡ ಸಾಹಿತ್ಯ ಬರಹದಲ್ಲಿ ವಿಶಿಷ್ಟವಾಗಿ ನೇಮಿಚಂದ್ರ ಅವರು ವೃತ್ತಿಯೊಡನೆ ಪ್ರವೃತ್ತಿಯಲ್ಲೂ ಛಾಪು ಮೂಡಿಸಿದವರು. ಹೊಸಗನ್ನಡ ಸಾಹಿತ್ಯಕ್ಕೆ ಮಹಿಳಾ ಸಂವೇದನೆಯ

ಅಭಿವ್ಯಕ್ತಿಯ ಮೂಲಕ ಗರಿ ಮೂಡಿಸಿದವರಾಗಿದ್ದಾರೆ. ತಮ್ಮದೇ ವಿಶಿಷ್ಟ ಬರವಣಿಗೆಯ ಮೂಲಕ ಜನಮಾನಸಕ್ಕೆ ಹತ್ತಿರವಾಗಿದ್ದಾರೆ. ಸುಮಾರು ನಾಲ್ಕು ದಶಕಗಳಿಂದಲೂ ವೈಶಿಷ್ಟ್ಯಗಳೊಂದೊಡಗೂಡಿದ ವೈಚಾರಿಕ ಬರಹಗಳ ಮೂಲಕ ಅರ್ಥಪೂರ್ಣವಾದ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ್ದಾರೆ.

ಸಾಹಿತ್ಯ ಕೃತಿಯ ವಸ್ತುವಿನ ದೃಷ್ಟಿಯಿಂದಲೂ, ಸಾಹಿತ್ಯ ಪ್ರಕಾರಗಳ ದೃಷ್ಟಿಯಿಂದಲೂ ವೈವಿಧ್ಯತೆಯನ್ನು ಮೆರೆದ ಲೇಖಕಿ ನೇಮಿಚಂದ್ರ. ವಿಭಿನ್ನತೆ, ತಂತ್ರಗಾರಿಕೆ, ದಿಟ್ಟ ಧೋರಣೆಗಳು, ಸ್ವಾನುಭವದ ಸಾಚಾತನ, ಪ್ರವಾಸದ ಅಭಿರುಚಿ, ಸ್ತ್ರೀ ಸಂವೇದನೆ, ಆಧುನೀಕರಣದ ಸವಾಲುಗಳು, ಐತಿಹಾಸಿಕ ವಿಚಾರಧಾರೆ ಇವರ ಸಾಹಿತ್ಯ ಕೃತಿಯಲ್ಲಿ ಕಾಣಬಹುದಾಗಿದೆ. ವೃತ್ತಿನಿರತ ಮಹಿಳೆಯರು, ವಿಜ್ಞಾನಿಗಳ ಜೀವನ ಚರಿತ್ರೆ, ವೈಜ್ಞಾನಿಕ ವಿಚಾರಧಾರೆ, ಸೂಕ್ಷ್ಮದೃಷ್ಟಿಯ ಅಂಕಣಬರಹಗಳು, ಸ್ತ್ರೀ ಸ್ವಾವಲಂಬನೆ, ವೈಚಾರಿಕ ಸ್ವಾತಂತ್ರ್ಯ, ಮಹಿಳಾ ಅಧ್ಯಯನ, ದುಡಿವ ದಂಪತಿಗಳಿಗೆ ಸಲಹೆ ಈ ಎಲ್ಲಾ ಆಯಾಮಗಳು ನೇಮಿಚಂದ್ರ ಸಾಹಿತ್ಯದಲ್ಲಿ ವಿಶಿಷ್ಟವಾಗಿದೆ. ಉದ್ಯೋಗಸ್ಥೆಯಾಗಿ, ಬರಹಗಾರ್ತಿಯಾಗಿ, ಬಹುಮುಖ ಪ್ರತಿಭೆಯಾಗಿ ಅವರ ಜೀವನ ಹಲವರಿಗೆ ಪ್ರೇರಣೆಯಾಗಿದೆ. ಕನ್ನಡ ಸಾಹಿತ್ಯ ಜಗತ್ತಿಗೆ ಹಲವು ಕೊಡುಗೆ ನೀಡಿರುವ ನೇಮಿಚಂದ್ರ ಅವರ ಸಾಹಿತ್ಯವನ್ನು ಅಧ್ಯಯನ ನಡೆಸುವುದು ಸೂಕ್ತವೆಂಬುದನ್ನು ಮನಗಂಡು 'ನೇಮಿಚಂದ್ರ ಅವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆ' ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧನೆ ಕೈಗೊಳ್ಳಲಾಗಿದೆ.

ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನಿರ್ಬಂಧವಿದ್ದ ಕಾಲದಲ್ಲೇ ವೈಜ್ಞಾನಿಕ ರಂಗದ ಶಿಕ್ಷಣವನ್ನು ಅರಸಿ ಹೋದವರು ನೇಮಿಚಂದ್ರ. ಇವರು ಮಹಿಳೆಯರಿಗೆ ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಅವಕಾಶಗಳೇ ಇಲ್ಲದಿರುವ ಸಂದರ್ಭದಲ್ಲಿ ತಂತ್ರಜ್ಞಾನ ಜಗತ್ತನ್ನೂ ಪ್ರವೇಶ ಮಾಡಿದ್ದಾರೆ. ಯಶಸ್ವಿ ವಿಜ್ಞಾನಿಯಾಗಿ ಯಶಸ್ವಿ ಬರಹಗಾರ್ತಿಯಾಗಿಯೂ ಗುರುತಿಸಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಇವರ ಬದುಕು ಹಲವರಿಗೆ ಆದರ್ಶಪ್ರಾಯವಾಗಿದೆ. ಇಂತಹ ಚೇತನಗಳ ಕುರಿತಾದ ಸಂಶೋಧನೆ ಸಮಾಜಕ್ಕೆ ಸ್ಫೂರ್ತಿದಾಯಕ ಎಂಬ ಉದ್ದೇಶದಿಂದ ಈ ಸಂಶೋಧನೆಯನ್ನು ನಡೆಸಲಾಗಿದೆ. ನೇಮಿಚಂದ್ರ ಅವರ ನಿಲುವುಗಳ ಮೇಲೆ ಸುತ್ತಮುತ್ತಲಿನ ಪರಿಸರ ಬೀರಿದ ಪ್ರಭಾವವನ್ನು ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಇವರ ಬದುಕಿನ ಬಗ್ಗೆ ವಿಶಿಷ್ಟ, ಸರಳ, ಸಮಾನತಾ ಸೂತ್ರದಡಿ ಬದುಕುತ್ತಿರುವ ಅವರ ಜೀವನದ ಸಂಪೂರ್ಣ ವಿವರಗಳನ್ನು ಪ್ರಸ್ತುತ ಸಂಶೋಧನೆಯಲ್ಲಿ ಗುರುತಿಸುವುದು ಮುಖ್ಯ ಉದ್ದೇಶವಾಗಿದೆ.

ಮಹಿಳಾ ಅಧ್ಯಯನಕ್ಕೆ ಕೊಡುಗೆ ನೀಡಿದ ಬೆರಳೆಣಿಕೆಯ ಲೇಖಕಿಯರಲ್ಲಿ ನೇಮಿಚಂದ್ರ ಅವರದ್ದು ಬಹುಮುಖ್ಯವಾದ ಹೆಸರು. ಇವರು ಮಹಿಳಾ ಅಧ್ಯಯನಕ್ಕೆ ನೀಡಿರುವ ಕೊಡುಗೆ ಅನನ್ಯವಾಗಿದೆ. ಮಹಿಳೆಯರ ಬದುಕನ್ನು ಪುನಶ್ಚೇತನಗೊಳಿಸುವ, ಸ್ಫೂರ್ತಿದಾಯಕವಾಗಿಸುವ ನಿಟ್ಟಿನಲ್ಲಿ ಪ್ರಮುಖ ಲೇಖಕರಾದ ನೇಮಿಚಂದ್ರ ಅವರ ಸ್ತ್ರೀ ಸಂವೇದನೆ ಕುರಿತಾದ ಸಮಗ್ರ ವಿಶ್ಲೇಷಣೆ ಸಮಾಜಕ್ಕೆ ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಸಂಶೋಧಿಸುವ, ವಿಶ್ಲೇಷಿಸುವ, ವಿಮರ್ಶಿಸುವ ಅಗತ್ಯವಿದೆ. ಈ ಕಾರಣದಿಂದಾಗಿ ನೇಮಿಚಂದ್ರ ಅವರು ಸಾಧನೆಗೈದಿರುವ ಎಲ್ಲಾ ಕ್ಷೇತ್ರಗಳನ್ನು ಸಂಶೋಧನೆಗೆ ಒಳಪಡಿಸುವ ಸತ್ಯಾಂಶಗಳನ್ನು ಕಂಡುಕೊಳ್ಳಲಾಗಿದೆ.

ಸಂಶೋಧನೆಗೆ ಸಂಬಂಧಿಸಿದಂತೆ ನೇಮಿಚಂದ್ರರ ಬರಹಗಳಲ್ಲಿ ಸ್ತ್ರೀಸಂವೇದನೆಯ ತಾತ್ವಿಕತೆಯ ಸ್ವರೂಪ, ಕನ್ನಡ ಸಾಹಿತ್ಯ ಮತ್ತು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಡಕವಾಗಿರುವ ಸ್ತ್ರೀಸಂವೇದನೆಯ ಬಗ್ಗೆ ಹಾಗೂ ಸ್ತ್ರೀವಾದದ ಉಗಮ ಮತ್ತು ಬೆಳವಣಿಗೆಯ ಕುರಿತು ಸವಿವರವಾಗಿ ಚರ್ಚಿಸಲಾಗಿದೆ. ಅವರ ಬದುಕಿನ ಚಿತ್ರಣ, ಬರಹಗಳ ವಿಶೇಷತೆ ಹಾಗೂ ವ್ಯಕ್ತಿತ್ವದ ಬಗ್ಗೆ ವಿವರಣಾತ್ಮಕವಾಗಿ ಉಲ್ಲೇಖಿಸಲಾಗಿದೆ. ನೇಮಿಚಂದ್ರ ಅವರ ಕಥಾ ಸಾಹಿತ್ಯ ಮತ್ತು ಕಾದಂಬರಿ ಸಾಹಿತ್ಯದಲ್ಲಿ ಅಡಕವಾಗಿರುವ ಸ್ತ್ರೀ ಸಂವೇದನೆಯ ನೆಲೆಯನ್ನು ವಿವರಿಸಲಾಗಿದೆ. ಪ್ರವಾಸ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಯ ಕುರಿತು ಚರ್ಚಿಸಲಾಗಿದೆ. ನೇಮಿಚಂದ್ರ ಅವರ ಜೀವನ ಚರಿತ್ರೆ ಮತ್ತು ಅಂಕಣ ಸಾಹಿತ್ಯಕ್ಕೆ ಅವರು ನೀಡಿರುವ ಅಮೋಘ ಕೊಡುಗೆಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

3. ಅಧ್ಯಯನದ ವ್ಯಾಪ್ತಿ

ನೇಮಿಚಂದ್ರ ಕಲೆಗಾಗಿ ಕಲೆ ಎಂದು ಬರೆದವರಲ್ಲ. ಹತ್ತಿರದಿಂದ ನೋಡಿ, ವಿಶ್ಲೇಷಿಸಿ, ಮಾಹಿತಿಗಳನ್ನು ಕಲೆಹಾಕಿ ಬರೆದವರು. ಬರಹಗಳ ವಿಭಿನ್ನತೆಯಿಂದ ಇವರು ಕನ್ನಡ ಸಾಹಿತ್ಯದಲ್ಲಿ ವಿಶೇಷರೆನಿಸಿದ್ದಾರೆ. ಮೇ 31, 2019ರಂದು ತಮ್ಮ ವೃತ್ತಿಯಿಂದ ನಿವೃತ್ತಿ ಹೊಂದಿದ್ದಾರೆ. ನಂತರದಲ್ಲೂ ಸಾಹಿತ್ಯ ಕೃಷಿಯನ್ನು ಮುಂದುವರೆಸುತ್ತಿದ್ದಾರೆ.

ನೇಮಿಚಂದ್ರರವರು ಕನ್ನಡ ಸಾಹಿತ್ಯ ಲೋಕದ ಸಾಹಿತ್ಯ ಪ್ರಿಯರಿಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಅವರು ಮಾಡಿರುವ ಸಾಹಿತ್ಯ ಕೃಷಿಯಲ್ಲಿ ಜನ್ಮತಾಳಿದಂತಹ ಕತೆ, ಕಾದಂಬರಿ, ಅಂಕಣ ಸಾಹಿತ್ಯ, ಪ್ರವಾಸ ಸಾಹಿತ್ಯ, ಕಥನ ಸಾಹಿತ್ಯಗಳಲ್ಲಿ ತಮ್ಮದೇ ಆದ ಛಾಪನ್ನು

ಮೂಡಿಸಿದ್ದಾರೆ. ಅವುಗಳಲ್ಲಿ ಅನೇಕ ಔಚಿತ್ಯಪೂರ್ಣವಾದ ಒಳನೋಟಗಳಿವೆ. ಅವುಗಳಲ್ಲಿ ಪ್ರಸ್ತುತ ಸಂಶೋಧನೆಯು ಮಹಿಳಾ ಸಂವೇದನೆಯ ಹಿನ್ನೆಲೆಯಿಂದ ಮಾತ್ರ ಅಧ್ಯಯನವನ್ನು ಕೈಗೊಳ್ಳಲಾಗಿದೆ. 'ನೇಮಿಚಂದ್ರರವರ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ನೆಲೆ' ಎಂಬ ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಾರಂಭದಲ್ಲಿ ಅಧ್ಯಯನದ ಪ್ರಸ್ತಾವನೆ, ಉದ್ದೇಶ, ವಿಧಾನ, ವ್ಯಾಪ್ತಿ, ಸ್ವರೂಪ, ಮಹತ್ವದ ಬಗೆಗೆ ತಿಳಿಸಲಾಗಿದೆ. ಮೊದಲಿಗೆ ಅಧ್ಯಯನದ ಪೀಠಿಕೆ, ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ, ವೈಧಾನಿಕತೆ, ಮಹತ್ವ, ಸಂಶೋಧನಾ ಪೂರ್ವ ಸಾಹಿತ್ಯ ಪರಾಮರ್ಶೆ ಎಂಬ ಉಪಶೀರ್ಷಿಕೆಗಳಲ್ಲಿ ವ್ಯಕ್ತಿ ಸಾಹಿತ್ಯದ ಅವಶ್ಯಕತೆ, ಅನನ್ಯತೆಯನ್ನು ವಿವಿಧ ನೆಲೆಗಳಲ್ಲಿ ಕಟ್ಟಿಕೊಡಲು ಯತ್ನಿಸಲಾಗಿದೆ.

4. ಅಧ್ಯಯನದ ವಿಧಾನ

"ನೇಮಿಚಂದ್ರರವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆ" ಎಂಬ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಇದುವರೆಗೂ ನೇಮಿಚಂದ್ರರವರಿಂದ ರಚನೆಗೊಂಡಿರುವ ಪುಸ್ತಕಗಳನ್ನು ಅಧ್ಯಯನ ಮಾಡಿ ಅದರಲ್ಲಿರುವ ಅಂಶಗಳನ್ನು ದಾಖಲಿಸಲಾಗಿದೆ. ಅದಷ್ಟೇ ಅಲ್ಲದೇ ಅವರ ಬರಹಗಳನ್ನು ಕುರಿತು ರಚನೆಗೊಂಡಿರುವ ಮಹಾಪ್ರಬಂಧಗಳು, ಕೃತಿಗಳು, ಲೇಖನಗಳನ್ನು ಮುಖ್ಯ ಪರಾಮರ್ಶನಕ್ಕಾಗಿ ಬಳಸಿಕೊಳ್ಳಲಾಗಿದೆ.. ಪ್ರಸ್ತುತ ಈ ವಿಷಯಕ್ಕೆ ಸಂಬಂಧಿಸಿದಂತೆ ಅವರ ಕೃತಿಗಳಲ್ಲಿನ ಮಹಿಳಾ ಸಂವೇದನೆಯ ಕುರಿತಂತೆ ಸೂಕ್ಮವಾಗಿ ವಿಶ್ಲೇಷಣಾತ್ಮಕ, ವಿವರಣಾತ್ಮಕ ಮತ್ತು ವಿಮರ್ಶಾತ್ಮಕ ನೆಲೆಗಳಿಂದ ವಿಷಯಗಳನ್ನು ಕೂಲಂಕುಶವಾಗಿ ಚರ್ಚಿಸಿ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಬಹು ಮುಖ್ಯವಾಗಿ ಇದು ಮಾಹಿತಿಪೂರ್ಣವೂ, ಗ್ರಂಥಾಧಾರಿತ ಅಧ್ಯಯನವಾಗಿದ್ದು ನಾಡಿನ ಪ್ರಸಿದ್ಧ ವಿಶ್ವವಿದ್ಯಾನಿಲಯಗಳ ಗ್ರಂಥಾಲಯಗಳ ಸಹಕಾರವನ್ನು ಪಡೆಯಲಾಗಿದೆ.

5. ಅಧ್ಯಯನದ ಸ್ವರೂಪ

'ಸ್ತ್ರೀ ಸಂವೇದನೆಯ ತಾತ್ವಿಕತೆಯ ಸ್ವರೂಪ' ಎಂಬ ಮೊದಲನೆಯ ಅಧ್ಯಾಯದಲ್ಲಿ 'ಸ್ತ್ರೀ ಸಂವೇದನೆಯ ಪರಿಕಲ್ಪನಾತ್ಮಕ ಅಧ್ಯಯನವಾಗಿದೆ. ಸ್ತ್ರೀ ಸಂವೇದನೆಯ ವೈಶಿಷ್ಟ್ಯಗಳು ಮತ್ತು ಜಾಗತಿಕ ಸಾಹಿತ್ಯ : ಮಹಿಳಾ ಸಂವೇದನೆ ಎಂಬ ಉಪ ವಿಭಾಗದಲ್ಲಿ ಜಾಗತಿಕ ಮಟ್ಟದಲ್ಲಿ ಮಹಿಳೆಯರು ಸ್ಥಿತಿಗತಿಗಳನ್ನು ತಿಳಿಸಲಾಗಿದೆ. ಕನ್ನಡ ಸಾಹಿತ್ಯ : ಮಹಿಳಾ ಸಂವೇದನೆ ಎಂಬ ಉಪಶೀರ್ಷಿಕೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯ ಬಗ್ಗೆ ಇರುವಂತಹ ನೆಲೆಗಳನ್ನು ಚರ್ಚಿಸಲಾಗಿದೆ. ಅದರಲ್ಲಿಯೇ ಪ್ರಾಚೀನ ಕನ್ನಡ ಸಾಹಿತ್ಯ ಮಧ್ಯಕಾಲೀನ ಕನ್ನಡ ಸಾಹಿತ್ಯ, ಮತ್ತು

ಜಾನಪದ ಸಾಹಿತ್ಯದಲ್ಲಿದ್ದಂತಹ ಮಹಿಳೆಯರ ವೇದನೆಯ ಬಗ್ಗೆ ವಿವರಿಸಲಾಗಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಎಂಬ ಉಪ ಶೀರ್ಷಿಕೆಯಲ್ಲಿ ನವೋದಯ ಸಾಹಿತ್ಯ, ಪ್ರಗತಿಶೀಲ ಸಾಹಿತ್ಯ, ನವ್ಯ ಸಾಹಿತ್ಯ ಮತ್ತು ದಲಿತ ಬಂಡಾಯ ಸಾಹಿತ್ಯದಲ್ಲಿ ಹೇಗೆ ಸ್ತ್ರೀ ಸಂವೇದನೆ ಪ್ರಕಟಗೊಂಡಿದೆ ಎಂಬುದನ್ನು ವಿಶ್ಲೇಷಣಾತ್ಮಕವಾಗಿ ವಿವರಿಸಲಾಗಿದೆ. ಸ್ತ್ರೀವಾದದ ಉಗಮ ಮತ್ತು ಬೆಳವಣಿಗೆ ಹಾಗೂ ಕೊನೆಯಲ್ಲಿ ನೇಮಿಚಂದ್ರರ ಸ್ತ್ರೀ ಸಂವೇದನೆ ಸಾಹಿತ್ಯವನ್ನು ಅವರ ಸಮಕಾಲೀನರ ಜೊತೆ ತುಲನಾತ್ಮಕತೆ ಕುರಿತು ಚರ್ಚಿಸಲಾಗಿದೆ.

'ನೇಮಿಚಂದ್ರ ಅವರ ಬದುಕು ಮತ್ತು ಬರಹ' ಎಂಬ ಎರಡನೆಯ ಅಧ್ಯಾಯದಲ್ಲಿ ನೇಮಿಚಂದ್ರ ರವರ ಬಾಲ್ಯ ಜೀವನ, ವಿದ್ಯಾಭ್ಯಾಸ, ಅವರ ಮೇಲಾದ ಕೌಟುಂಬಿಕ ಪರಿಸರದ ಪ್ರಭಾವ, ವೈವಾಹಿಕ ಜೀವನ, ಅವರ ಸಾಹಿತ್ಯ ಕ್ಷೇತ್ರದ ಬಗ್ಗೆ ಅಂದರೆ, ಕತೆ, ಕಾದಂಬರಿ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ಸಂಪಾದಕತ್ವ, ಅಂಕಣ ಬರಹಗಳ ಬಗ್ಗೆ ಚರ್ಚಿಸಲಾಗಿದೆ.

'ಕಥಾಸಾಹಿತ್ಯ ಮತ್ತು ಕಾದಂಬರಿ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ' ಎಂಬ ಮೂರನೆಯ ಅಧ್ಯಾಯದಲ್ಲಿ ನೇಮಿಚಂದ್ರ ಅವರ ಬರಹಗಳಲ್ಲಿನ ವಿನ್ಯಾಸ ಅಂದರೆ ಆಧುನಿಕತೆಯ ವಿನ್ಯಾಸ, ಸ್ವಾವಲಂಬನೆ, ಆಧುನಿಕ ಬದುಕಿನ ವಿಪರ್ಯಾಸ, ಸಾಂಸ್ಕೃತಿಕ ವಿನ್ಯಾಸ, ಕಥನ ಶೈಲಿಯ ವಿನ್ಯಾಸ ಎಂಬ ನೆಲೆಯಲ್ಲಿ ಉಪ ಶೀರ್ಷಿಕೆಗಳಾಗಿ ವಿಂಗಡಿಸಿಕೊಂಡು ಈ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಅಭ್ಯಸಿಸಲಾಗಿದೆ. ಕೊನೆಯಲ್ಲಿ ನೇಮಿಚಂದ್ರರ ಕಥಾ ಸಾಹಿತ್ಯವನ್ನು ಅವರ ಸಮಕಾಲೀನರ ಜೊತೆ ತುಲನೆ ಮಾಡಿ ಹೇಗೆ ನೇಮಿಚಂದ್ರ ಅವರ ಸಾಹಿತ್ಯವು ಭಿನ್ನವಾಗಿದೆ ಎಂಬುದನ್ನು ವಿಶ್ಲೇಷಣೆ ಮಾಡಲಾಗಿದೆ.

'ನೇಮಿಚಂದ್ರ ಅವರ ಪ್ರವಾಸ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆ' ಎಂಬ ನಾಲ್ಕನೆಯ ಅಧ್ಯಾಯದಲ್ಲಿ ಕನ್ನಡದಲ್ಲಿ ಮಹಿಳಾ ಪ್ರವಾಸ ಸಾಹಿತ್ಯದ ಕುರಿತು ಚರ್ಚಿಸಲಾಗಿದೆ. ನೇಮಿಚಂದ್ರರ ಪ್ರವಾಸ ಕಥನಗಳ ನೆಲೆ–ಬೆಲೆ, ಪ್ರವಾಸ ಸ್ಥಳಗಳ ಆಯ್ಕೆಯಲ್ಲಿನ ಭಿನ್ನತೆ, ಪ್ರವಾಸಕ್ಕೆ ಪ್ರೇರಣೆ, ಅವರ ಪಯಣದ ಉದ್ದೇಶ, ಮಹತ್ವದ ಕುರಿತು ವಿವರಸಿಲಾಗಿದೆ. ಅವರ ಮೊದಲ ಪ್ರವಾಸ ಕಥನವಾದ 'ಒಂದು ಕನಸಿನ ಪಯಣ'ದಲ್ಲಿ ಪ್ರವಾಸ ಕೈಗೊಂಡ ಸಂದರ್ಭದಲ್ಲಿನ ಸವಾಲುಗಳೇನು? ಅವುಗಳ ಪರಿಹಾರೋಪಾಯಗಳೇನು? ಎಂಬುದರ ಬಗ್ಗೆ ವಿವರಿಸಲಾಗಿದೆ. ಮಹಿಳಾ ಸಾಧಕಿಯರ ಬಗ್ಗೆ, ಮಹಿಳಾ ವಿಜ್ಞಾನಿಗಳು, ಮಹಿಳಾ ಸಾಮಾಜಿಕ ಹೋರಾಟಗಾರರು ಎಂಬುದಾಗಿ ಅಧ್ಯಯನಕ್ಕೆ ಒಳಪಡಿಸಿ ವಿವರಿಸಲಾಗಿದೆ. ಎರಡನೆ ಪ್ರವಾಸ ಕಥನ 'ಪೆರುವಿನ ಪವಿತ್ರ ಕಣಿವೆಯಲ್ಲಿ'. ಈ ಪ್ರವಾಸ

ಕಥನವು ಪೆರುವಿನ ಪ್ರವಾಸದ ಕುರಿತು ನೇಮಿಚಂದ್ರ ಅವರು ಇದರಲ್ಲಿ ಸ್ತ್ರೀ ಪಾತ್ರ ಚಿತ್ರಣ, ಐತಿಹಾಸಿಕ ಕ್ಷೇತ್ರದಲ್ಲಿ ಸ್ತ್ರೀ, ರಾಜಕೀಯ ಕ್ಷೇತ್ರದಲ್ಲಿ ಸ್ತ್ರೀ, ಎಂಬ ನೆಲೆಗಳಿಂದ ವಿಶ್ಲೇಷಿಸಲಾಗಿದೆ. ಪೆರುವಿನ ಚಾರಿತ್ರಿಕ ಮಹತ್ವ ಭೌಗೋಳಿಕತೆ, ನಿಸರ್ಗ ಸೌಂದರ್ಯ, ಸಾಂಸ್ಕೃತಿಕ ಪರಂಪರೆ, ಪೆರುವಿನ ನೆಲದಲ್ಲಿನ ಸ್ತ್ರೀ ಸಂವೇದನೆಯ ಮಜಲುಗಳನ್ನು ಗುರುತಿಸಿ ವಿವರಿಸಲಾಗಿದೆ. ಕೊನೆಯಲ್ಲಿ ನೇಮಿಚಂದ್ರರ ಪ್ರವಾಸ ಸಾಹಿತ್ಯವನ್ನು ಅವರ ಸಮಕಾಲೀನರ ಜೊತೆ ತುಲನೆ ಮಾಡಿ ಹೇಗೆ ಉಳಿದ ಲೇಖಕಿಯರಿಗಿಂತ ಭಿನ್ನವಾಗಿದ್ದಾರೆ ಎಂಬುದನ್ನು ವಿವರಿಸಲಾಗಿದೆ.

'ಜೀವನ ಚರಿತ್ರೆ ಸಾಹಿತ್ಯಕ್ಕೆ ನೇಮಿಚಂದ್ರ ಅವರ ಕೊಡುಗೆ' ಎಂಬ ಐದನೆಯ ಅಧ್ಯಾಯದಲ್ಲಿ ಜೀವನ ಚರಿತ್ರೆ ಹಾಗೂ ಅಂಕಣ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಎಂಬ ಉಪ ಶೀರ್ಷಿಕೆಯನ್ನು ಮಾಡಿಕೊಂಡು ಅದರಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧನೆಯನ್ನು ಮಾಡಿದಂತಹ ಮಹಿಳೆಯರ ಕುರಿತಾದಂತಹ ಜೀವನ ಚರಿತ್ರೆಯನ್ನು ವಿವರಿಸಲಾಗಿದೆ. ಅದರಲ್ಲಿ ಮಹಿಳೆಯರ ಕುರಿತಾದ ಜೀವನ ಚರಿತ್ರೆ, ಹೋರಾಟದ ಹಾದಿಯಲ್ಲಿ ಧೀರ ಮಹಿಳೆಯರು, ಮಹಿಳಾ ವಿಜ್ಞಾನಿಗಳು, ಮಹಿಳಾ ವೈಮಾನಿಕರು ಮತ್ತು ಭಾರತದ ಮಹಿಳಾ ವೈದ್ಯರ ಕುರಿತು ಚರ್ಚಿಸಲಾಗಿದೆ.

'ನೇಮಿಚಂದ್ರ ಅವರ ಅಂಕಣ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ' ಎಂಬ ಆರನೆಯ ಅಧ್ಯಾಯದಲ್ಲಿ ಕನ್ನಡದಲ್ಲಿ ಅಂಕಣ ಸಾಹಿತ್ಯವನ್ನು ಕುರಿತು ಮತ್ತು ಮಹಿಳೆಯರ ಹಿನ್ನೆಲೆಯಲ್ಲಿ ಅಂಕಣ ಸಾಹಿತ್ಯವನ್ನು ಕುರಿತು ಚರ್ಚಿಸಲಾಗಿದೆ. ಮಹಿಳೆಯರ ಅಂಕಣ ಸಾಹಿತ್ಯವನ್ನು ವಿವಿಧ ಆಯಾಮಗಳಿಂದ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅದರಲ್ಲಿ ಮಹಿಳೆ ಮತ್ತು ಆರೋಗ್ಯ ಕುರಿತಂತೆ, ಸಾಮಾಜಿಕ ಚಿಂತನೆ ಮತ್ತು ಜೀವನೋತ್ಸಾಹ ತುಂಬುವ ಬರಹಗಳು, ಎಂದು ಮೂರು ಭಾಗವಾಗಿ ಮಾಡಿಕೊಂಡು ಅಧ್ಯಯನದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಜೀವನ ಚರಿತ್ರೆಗಳ ಬರವಣಿಗೆಗೆ ಆಯ್ಕೆಯಾದ ವ್ಯಕ್ತಿ, ವಸ್ತು, ಉದ್ದೇಶ, ಅವುಗಳ ರಚನೆಗೆ ಉಂಟಾದ ಪ್ರೇರಣೆ, ಜೀವನ ಚರಿತ್ರೆಗಳ ನಡುವಿನ ಭಿನ್ನತೆ, ಅನನ್ಯತೆಯ ಕುರಿತು ವಿಶ್ಲೇಷಿಸಲಾಗಿದೆ. ನೇಮಿಚಂದ್ರ ಅವರ ಬರವಣಿಗೆಯ ಸಿಂಹಪಾಲನ್ನು ಅವರ ಅಂಕಣ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಈ ಕುರಿತು ಅವರು ಸುಮಾರು 140ಕ್ಕೂ ಅಧಿಕ ಲೇಖನಗಳನ್ನು ಬರೆದಿದ್ದಾರೆ. ಅಂಕಣ ಬರಹಗಳೇ ನೇಮಿಚಂದ್ರ ಅವರ ಅಭಿರುಚಿ, ಆಸಕ್ತಿಗಳ ಅಭಿವ್ಯಕ್ತಿಗೆ ಆಯ್ದುಕೊಂಡ ಬಹುಮುಖ್ಯ ಪ್ರಕಾರವಾಗಿದೆ. ವಿಶಿಷ್ಟ ಶೀರ್ಷಿಕೆಗಳು ಹಾಗೂ ವಿಚಾರಧಾರೆಗಳಿಂದ ಗಮನ ಸೆಳೆಯುವ ಇವರ ಅಂಕಣ ಸಾಹಿತ್ಯವನ್ನು ಕೂಲಂಕುಷವಾಗಿ ಚರ್ಚಿಸಲಾಗಿದೆ. ಕೊನೆಯಲ್ಲಿ ನೇಮಿಚಂದ್ರರ ಅಂಕಣ ಸಾಹಿತ್ಯವು ಅವರ ಸಮಕಾಲೀನರ ಜೊತೆ

ತುಲನೆ ಮಾಡಿ ಹೇಗೆ ಉಳಿದ ಲೇಖಕಿಯರಿಗಿಂತ ಹೇಗೆ ಭಿನ್ನವಾಗಿದ್ದಾರೆ ಎಂಬುದನ್ನು ವಿವರಿಸಲಾಗಿದೆ.

ಸಮಾರೋಪ ಭಾಗದಲ್ಲಿ, ಒಟ್ಟಾರೆ ಅಧ್ಯಯನದಿಂದ ಕಂಡುಕೊಂಡ ಅಧ್ಯಯನ ಫಲಿತಗಳು ಮತ್ತು ಅಧ್ಯಯನದ ಮುಂದಿನ ಸಾಧ್ಯತೆಗಳನ್ನು ಸೂಚಿಸಲಾಗಿದೆ. ಕೊನೆಯಲ್ಲಿ ಅನುಬಂಧಗಳನ್ನು ನೀಡಲಾಗಿದೆ. ಅನುಬಂಧ ಒಂದರಲ್ಲಿ ಪ್ರಾಥಮಿಕ ಆಕರಗಳು, ಪರಾಮರ್ಶನ ಗ್ರಂಥಗಳ ಪಟ್ಟಿ, ಅಧ್ಯಯನಕ್ಕೆ ಬಳಸಿಕೊಂಡ ನಿಘಂಟು ಮತ್ತು ವಿಶ್ವಕೋಶಗಳು, ಮಹಾಪ್ರಬಂಧಗಳು, ಸಂಶೋಧನ ಲೇಖನಗಳು, ಸಮ್ಮೇಳನ ಗ್ರಂಥಗಳ ಲೇಖನಗಳು, ದಿನಪತ್ರಿಕೆಯಲ್ಲಿ ಪ್ರಕಟಗೊಂಡ ಸಂಶೋಧನ ಲೇಖನಗಳು, ಅಂತರ್ಜಾಲದ ಸಹಾಯದಿಂದ ಪಡೆದುಕೊಂಡ ಮಾಹಿತಿಗಳನ್ನು ಒದಗಿಸಲಾಗಿದೆ. ಅನುಬಂಧ ಎರಡರಲ್ಲಿ ನೇಮಿಚಂದ್ರ ಅವರ ಬದುಕಿನ ಹೆಜ್ಜೆಗಳನ್ನು ಹಾಕಲಾಗಿದೆ ಮತ್ತು ಅನುಬಂಧ ಮೂರರಲ್ಲಿ ನೇಮಿಚಂದ್ರರವರ ಕೊಡುಗೆಯನ್ನು ಗಮನಿಸಿ ನೀಡಿರುವ ಗೌರವ ಪುರಸ್ಕಾರಗಳ ವಿವರಗಳನ್ನು ನೀಡಲಾಗಿದೆ. ಅನುಬಂಧ ನಾಲ್ಕರಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ ಛಾಯಾಚಿತ್ರಗಳನ್ನು ನೀಡಲಾಗಿದೆ.

6. ಅಧ್ಯಯನದ ಮಹತ್ವ

ನೇಮಿಚಂದ್ರ ಅವರ ಬರಹಗಳು ಕೇವಲ ಪದಗುಚ್ಛಗಳ ಜೋಡಣೆಯಲ್ಲ. ಅವರು ಬರೆದಿರುವ ಕಥೆಗಳು ಕಲ್ಪನೆಯಿಂದ ಕೂಡಿರುವ ಮನೋರಂಜನಾತ್ಮಕ ಬರಹಗಳು ಅಲ್ಲ, ಅವರ ಕಥೆಗಳು ಇತಿಹಾಸದ ಕಥನಗಳು. ಅವುಗಳಲ್ಲಿ ಅದೆಷ್ಟೋ ಮುಚ್ಚಿ ಹೋದ ಸತ್ಯಗಳು ಬೆಳಕಿಗೆ ಬಂದಿವೆ. ಜೀವನ ಮುಗಿಯಿತೆಂದು ನಿರಾಶರಾದವರಿಗೆ ಆಶಾಭಾವನೆಯನ್ನು ಹುಟ್ಟು ಹಾಕಿವೆ. ಸೋತವರಿಗೆ ಜೀವನೋತ್ಸಾಹವನ್ನು ತುಂಬಿವೆ. ಕುತೂಹಲದಯಕವಾದ ಬರವಣಿಗೆಯಿಂದಾಗಿ ಕನ್ನಡದ ಬಹುಮಂದಿ ಓದುಗರು ಇವರ ಹೊಸ ಕೃತಿಯ ನಿರೀಕ್ಷೆಯಲ್ಲಿರುವುದನ್ನು ಕಾಣಬಹುದಾಗಿದೆ.

ಕನ್ನಡ ಸಾಹಿತ್ಯ ಲೋಕದ ಬಹಳ ಜನಪ್ರಿಯ ಲೇಖಕಿ ನೇಮಿಚಂದ್ರರವರು ತಮ್ಮ ಬರಹಗಳ ಮುಖಾಂತರ ಮಹಿಳಾ ಚಿಂತನೆಗಳು, ವೈಜ್ಞಾನಿಕ ನೆಲೆಯ ಚರಿತ್ರೆಗಳು, ಸಾಮಾಜಿಕ ಚಿಂತನೆ ಹಾಗೂ ಮಾನವೀಯ ಮೌಲ್ಯಗಳನ್ನು ತಮ್ಮ ಅಕ್ಷರಗಳಲ್ಲಿ ಪರಿಣಾಮಕಾರಿಯಾಗಿ ಹಿಡಿದಿಡುತ್ತಾ ಬಂದಿದ್ದಾರೆ. ಅವರ ಸಾಹಿತ್ಯವು ಮಹಿಳೆಯರ ಸಮಸ್ಯೆಗಳಿಗೆ ಸ್ಪಂದನೆ ಮತ್ತು ಅವರ ಹಕ್ಕುಗಳ ಪರವಾಗಿಯೇ ಇವೆ. ಅವರ ಕಥೆಗಳು ಮತ್ತು ಕಾದಂಬರಿಗಳು ಮಹಿಳೆಯರ ಬದುಕು, ಅವರ ಹಕ್ಕುಗಳು ಮತ್ತು

ಸ್ವಾತಂತ್ರ್ಯವನ್ನು ಕೇಂದ್ರದಲ್ಲಿಟ್ಟು ಬರೆಯಲ್ಪಟ್ಟಿವೆ. 'ನ್ಯಾಯಕ್ಕಾಗಿ ಕಾದ ಭಾಂವ್ರಿ ದೇವಿ ಕಥೆ' ಎಂಬ ಕೃತಿಯಲ್ಲಿ ಅವರು ಮಹಿಳಾ ಸಬಲೀಕರಣದ ಪ್ರಾಮುಖ್ಯತೆ ಮತ್ತು ಸಮಾಜದಲ್ಲಿ ನ್ಯಾಯಕ್ಕಾಗಿ ಹೋರಾಟದ ಅವಶ್ಯಕತೆಯನ್ನು ವಿವರಿಸಿದ್ದಾರೆ. ವೈಜ್ಞಾನಿಕ ಸಾಹಿತ್ಯಕ್ಕೆ ಅವರು ತಮ್ಮದೇ ಆದಂತಹ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ. ಅವರು ಕಾರ್ಯಕ್ಷೇತ್ರ ವಿಜ್ಞಾನವಾದ್ದರಿಂದ ಅವರು 'ಮೇರಿ ಕ್ಯೂರಿ', 'ಮಹಿಳಾ ವಿಜ್ಞಾನಿಗಳು', 'ಥಾಮಸ್ ಆಲ್ವ ಎಡಿಸನ್' ಮುಂತಾದ ವೈಜ್ಞಾನಿಕ ಚರಿತ್ರೆಗಳ ಮೂಲಕ ವಿಜ್ಞಾನ ಸಾಹಿತ್ಯವನ್ನು ಓದುಗರಿಗೆ ಉಣಬಡಿಸಿದ್ದಾರೆ. ಅದಷ್ಟೇ ಅಲ್ಲದೇ ಅವರ ಬರಹಗಳಲ್ಲಿ ಸಾಮಾಜಿಕ ಚಿತ್ರಣ ಮತ್ತು ಮಾನವೀಯ ಮೌಲ್ಯಗಳು ಹೆಚ್ಚಾಗಿ ಇರುವುದನ್ನು ಮನಗಾಣಬಹುದಾಗಿದೆ. ಕಥೆಗಳು ಸಮಾಜದ ಕಟ್ಟಕಡೆಯ ವ್ಯಕ್ತಿಯ ಜೀವನದ ಬಗ್ಗೆ, ಅವರ ಸಂಕಷ್ಟ, ಸೋಲು, ಗೆಲುವು ಮತ್ತು ಅಂತಹ ವ್ಯಕ್ತಿಗಳ ಮನೋವಿಕಾಸದ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಇದು ಇವರ ಬರಹಗಳನ್ನು ಓದುವ ಓದುಗರಿಗೆ ಜೀವನದ ನಿಜವಾದ ಅರ್ಥವನ್ನು ದರ್ಶನ ಮಾಡಿಸುತ್ತದೆ. ಇವರು ತಮ್ಮ ಪ್ರವಾಸ ಕಥನಗಳ ಮೂಲಕ ಬೇರೆ ಬೇರೆ ದೇಶಗಳ ಸಂಸ್ಕೃತಿಯನ್ನು ಅನಾವರಣಗೊಳಿಸಿದ್ದಾರೆ. ಇವರ 'ಒಂದು ಕನಸಿನ ಪಯಣ' ಮತ್ತು 'ಪೆರುವಿನ ಪವಿತ್ರ ಕಣಿವೆಯಲ್ಲಿ' ಎಂಬ ಕೃತಿಗಳು ಬೇರೆ ಬೇರೆ ದೇಶಗಳ ಸಂಸ್ಕೃತಿಯ ವಿಶೇಷತೆಗಳನ್ನು ಪರಿಚಯಿಸುತ್ತವೆ. ಇವುಗಳು ಓದುಗರಿಗೆ ಜಾಗತಿಕ ಮಟ್ಟದಲ್ಲಿ ಜ್ಞಾನ ವಿಸ್ತರಣೆ ನೀಡುವಲ್ಲಿ ಸಹಕಾರಿಯಾಗಿವೆ.

ನೇಮಿಚಂದ್ರರ ಸಾಹಿತ್ಯವು ಕನ್ನಡ ಭಾಷೆಯನ್ನು ವೈಶಿಷ್ಟ್ಯಪೂರ್ಣವಾಗಿ ಬಳಸಿಕೊಂಡು, ಸರಳ ಮತ್ತು ಮನೋಹರ ಶೈಲಿಯಲ್ಲಿ ಬರೆಯಲ್ಪಟ್ಟಿದೆ. ಇವರ ಬರಹದ ಶೈಲಿ ಮತ್ತು ಭಾಷೆಯು ಬಹಳ ಸರಳ, ಸ್ಪಷ್ಟ ಮತ್ತು ಪರಿಣಾಮಕಾರಿಯಾಗಿವೆ. ಅವರ ಕಥೆಗಳಲ್ಲಿನ ವೈಚಾರಿಕತೆ ಮತ್ತು ಭಾವನಾತ್ಮಕತೆಯ ಅಂಶಗಳು ಯಾರನ್ನೇ ಆದರೂ ಸಮರ್ಥವಾಗಿ ಬೆಸೆಯುವ ಶಕ್ತಿಯನ್ನು ಹೊಂದಿವೆ. ನೇಮಿಚಂದ್ರರು ವೈವಿಧ್ಯಮಯ ವಿಷಯಗಳು, ಸಶಕ್ತ ಮಹಿಳೆಯರ ದೃಷ್ಟಿಕೋನ ಮತ್ತು ವಿಜ್ಞಾನಕ್ಕೆ ಆದ್ಯತೆ ನೀಡುವ ಮೂಲಕ ಕನ್ನಡಿಗರ ಹೃದಯದಲ್ಲಿ ಅಚ್ಚಳಿಯದ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ನೇಮಿಚಂದ್ರರವರು ಮಹಿಳೆಯರ ಕುರಿತು ಕೊಡುಗೆಯನ್ನು ನೀಡಿರುವವರಲ್ಲಿ ಅಗ್ರಗಣ್ಯರು. ಇವರು ನೀಡಿರುವ ಕೊಡುಗೆ ಅನನ್ಯವಾಗಿದೆ. ಏಕೆಂದರೆ ಇವರ ಬರಹಗಳಲ್ಲಿ ಮಹಿಳೆಯನ್ನು ಏನನ್ನಾದರೂ ಸಾಧಿಸಲೇ ಬೇಕೆಂಬ ಛಲವನ್ನು ತುಂಬಿ ಸಾಧಿಸುವ ಹಾಗೆ ಮಾಡಿರುವವರು. ಮಹಿಳೆಯು ಪುರುಷ ಪ್ರಧಾನ ಸಮಾಜ ಹೇರಿರುವ ಕಟ್ಟುಪಾಡುಗಳ ದಾಸಿಯಲ್ಲ, ಅವಳು

ಸಬಲೀಕರಣಗೊಳಿಸುವ, ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಮಹಿಳಾ ಸಂವೇದನೆಯ ಕುರಿತಾದ ಸಮಗ್ರ ಅಧ್ಯಯನವು ಸಮಾಜಕ್ಕೆ ಅನಿವಾರ್ಯವಾಗಿದೆ. ಈ ಕುರಿತಂತೆ ನೇಮಿಚಂದ್ರರವರ ಸಾಹಿತ್ಯವನ್ನು ಸಂಶೋಧಿಸುವ, ವಿಶ್ಲೇಶಿಸುವ ಮತ್ತು ವಿಮರ್ಶಿಸಬೇಕಾದ ಅಗತ್ಯವಿದೆ. ಅವರು ಮಹಿಳೆಯರ ನಿಲುವುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಲೆಹಾಕಿದ್ದಾರೆ. ಯಾವುದೇ ದೇಶವಾಗಲಿ ಅಲ್ಲಿ ಹೆಚ್ಚಿನ ಶೋಷಣೆಗೆ ಒಳಗಾಗುವುದು ಹೆಣ್ಣೇ ಎಂಬ ನಿಲುವಿಗೆ ನೇಮಿಚಂದ್ರರವರು ಬರುತ್ತಾರೆ. ಏಕೆಂದರೆ ನೇಮಿಚಂದ್ರರವರು ಒಬ್ಬ ವಿಜ್ಞಾನಿಯಾಗಿ, ಮಹಿಳೆಯಾಗಿ, ತಾಯಿಯಾಗಿ, ಮಹಿಳೆಯ ಸಮಸ್ಯೆಗಳನ್ನು ತೆರೆದಿಡುತ್ತಾರೆ. ಹೆಚ್ಚಿನ ಸಂಶೋಧನೆಗಾಗಿ ಜಾಗತಿಕ ಮಟ್ಟದಲ್ಲಿ ಹೆಣ್ಣಿನ ಸ್ಥಾನಮಾನ ಹೇಗಿರಬಹುದೆಂಬ ಕುತೂಹಲದಿಂದ ಬೇರೆ ಬೇರೆ ದೇಶಗಳಿಗೆ ಪರ್ಯಟನೆ ಮಾಡಿ ಪ್ರಸ್ತುತ ಕಾಲಮಾನದಲ್ಲಿ ಹೆಣ್ಣಿನ ಶೋಚನೀಯ ಸ್ಥಿತಿಗತಿಗಳನ್ನು ವಿವರವಾಗಿ ತಮ್ಮ ಬರಹಗಳಲ್ಲಿ ಚಿತ್ರಿಸಿದ್ದಾರೆ. ಈ ಎಲ್ಲಾ ಅಂಶಗಳಿಂದ **'ನೇಮಿಚಂದ್ರ ಅವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆ'** ಎಂಬ ಶೀರ್ಷಿಕೆಯನ್ನು ಈ ಸಂಶೋಧನೆಯು ಮಹತ್ವಪೂರ್ಣವಾದುದು ಎಂದು ಭಾವಿಸಲಾಗಿದೆ.

7. ಅಧ್ಯಯನದ ಫಲಿತಗಳು

ಪ್ರಸ್ತುತ ಸಂಶೋಧನಾ ಮಹಾಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳಿದ್ದು, ನೇಮಿಚಂದ್ರ ಅವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯನ್ನು ಇಲ್ಲಿ ವಿವರಣಾತ್ಮಕವಾಗಿ ಚರ್ಚಿಸಿ ವಿಶ್ಲೇಷಿಸಲಾಗಿದೆ. 'ನೇಮಿಚಂದ್ರರವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆ' ಎಂಬ ಸಂಶೋಧನೆಗೆ ಸಂಬಂಧಿಸಿದಂತೆ ಅಧ್ಯಯನದ ಪ್ರಾರಂಭದಲ್ಲಿ ಅಧ್ಯಯನದ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸ್ವರೂಪ ಮತ್ತು ಮಹತ್ವವನ್ನು ಗುರುತಿಸಿ, ಈ ವಿಷಯದ ಕುರಿತ ಈವರೆಗಿನ ಅಧ್ಯಯನಗಳ ಸಮೀಕ್ಷೆಯನ್ನು ನಡೆಸಲಾಗಿದೆ.

'ಸ್ತ್ರೀ ಸಂವೇದನೆಯ ತಾತ್ವಿಕತೆಯ ಸ್ವರೂಪ' ಎಂಬ ಮೊದಲನೆಯ ಅಧ್ಯಾಯದಲ್ಲಿ ಸ್ತ್ರೀ ಸಂವೇದನೆಯ ವೈಶಿಷ್ಟ್ಯಗಳು ಮತ್ತು ಜಾಗತಿಕ ಮಟ್ಟದ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯ ಕುರಿತು ಸೂಕ್ಷ್ಮವಾಗಿ ವಿವರಿಸಲಾಗಿದೆ. ಕನ್ನಡ ಸಾಹಿತ್ಯ : ಮಹಿಳಾ ಸಂವೇದನೆ ಎಂಬ ಉಪವಿಭಾಗದಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಎಂಬ ಉಪಶೀರ್ಷಿಕೆಯಲ್ಲಿ ವೇದಗಳ ಕಾಲ, ರಾಮಾಯಣ, ಮಹಾಭಾರತ, ಪುರಾಣಗಳ ಕಾಲದಲ್ಲಿ ಹೆಣ್ಣಿನ ಮಾನಾಪಹರಣ, ಹೆಣ್ಣಿನ ಅಪಹರಣ, ಬಹುಪತ್ನಿತ್ವ, ವನವಾಸ, ಬಾಲ್ಯವಿವಾಹ, ಗಂಧರ್ವ ವಿವಾಹ, ಸತಿಪದ್ಧತಿ,

ಅಗ್ನಿಪ್ರವೇಶ, ದಾಸಿಪದ್ಧತಿ, ಹೆಣ್ಣನ್ನು ಮಾರುವುದು, ಒತ್ತೆ ಇಡುವುದು, ಕಿವಿ ಮೂಗು ಕತ್ತರಿಸುವುದು. ಹೀಗೆ ಒಂದಲ್ಲ ಒಂದು ಕಾರಣಕ್ಕೆ ಪ್ರಾಚೀನ ಕಾವ್ಯಗಳಲ್ಲೂ ಸಹ ಹೆಣ್ಣನ್ನು ತುಂಬಾ ಶೋಷಿಸಿರುವುದು ತಿಳಿದು ಬರುತ್ತದೆ. ಅದರಲ್ಲಿ ಮತ್ಸ್ಯಗಂಧಿ, ಮಾದ್ರಿಯ ಸ್ಥಿತಿ, ಅಹಲ್ಯೆಯ ಪ್ರಕರಣ, ಅನಸೂಯಳ ಕಥೆ, ಮೇನಕೆ, ಸೀತೆ, ಊರ್ಮಿಳೆ, ದ್ರೌಪದಿಯ ಶೋಚನಿಯ ಸ್ಥಿತಿಯನ್ನು ವಿವರಿಸಲಾಗಿದೆ.

12ನೇ ಶತಮಾನದ ತರುವಾಯ ಬಂದಂತಹ ಕವಿಗಳಾದ ಹರಿಹರ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶ, ಚಾಮರಸ, ರತ್ನಾಕರವರ್ಣಿ ಅವರ ಬರಹಗಳಲ್ಲಿ ಸ್ತ್ರೀ ಸಂವೇದನೆಯನ್ನು ತಿಳಿಸಲಾಗಿದೆ. 1850ರ ವರೆಗಿನ ಸಾಂಗತ್ಯದ ಹುಲುಸಾದ ಕಾಲದಲ್ಲಿ ಸಂಚಿಹೊನ್ನಮ್ಮ, ಶೃಂಗಾರಮ್ಮ, ಹೆಳವನಕಟ್ಟೆ ಗಿರಿಯಮ್ಮ, ಚೆಲುವಾಂಬೆ ಮುಂತಾದವರ ಬರಹಗಳಲ್ಲಿನ ಸಂವೇದನೆಯನ್ನು ವಿವರಿಸಲಾಗಿದೆ. ಜಾನಪದ ಸಾಹಿತ್ಯದ ಪ್ರಕಾರಗಳಲ್ಲೂ ಸಹ ಹೆಣ್ಣಿಗೆ ಶೋಷಣೆ ಮಾಡಿರುವುದು ಕಂಡುಬರುತ್ತದೆ. ಈ ಅಧ್ಯಯನದಲ್ಲಿ ಕತೆ, ಗೀತೆಗಳಲ್ಲಿ ಮಹಿಳೆಯು ತವರಿನ ಬಗ್ಗೆ ಹೊಂದಿರುವ ಪ್ರೀತಿಯನ್ನು, ಮಲ್ಲನ ಗೌಡನು ಕೆರೆಗೆ ತನ್ನ ಸೊಸೆಯನ್ನು ಬಲಿಕೊಡುವ ಪ್ರಸಂಗ, ಇನ್ನೂ ಹಲವಾರು ಅಂಶಗಳಲ್ಲಿನ ಮಹಿಳಾ ಸಂವೇದನೆಯ ಕುರಿತು ಚರ್ಚಿಸಲಾಗಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಎಂಬ ಉಪಶೀರ್ಷಿಕೆಯಲ್ಲಿ ಬೇರೆ ಬೇರೆ ಭಾಗಗಳನ್ನು ಮಾಡಿಕೊಂಡು ಅದರಲ್ಲಿ ನವೋದಯ ಸಾಹಿತ್ಯ, ಪ್ರಗತಿಶೀಲ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ, ನವ್ಯಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ, ದಲಿತ ಬಂಡಾಯ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಗಳನ್ನು ಗುರುತಿಸಲಾಗಿದೆ.

ಎರಡನೆಯ ಅಧ್ಯಾಯವಾದ 'ನೇಮಿಚಂದ್ರ ಅವರ ಬದುಕು ಮತ್ತು ಬರಹ' ಎಂಬುವುದರಲ್ಲಿ ನೇಮಿಚಂದ್ರ ಅವರ ಕುರಿತು ಬಾಲ್ಯ ಜೀವನದಲ್ಲಿ ಅವರಿಗೆ ಆದಂತಹ ಮನೆಯ ವಾತಾವರಣ, ಪ್ರೇರಣಾದಾಯಕವಾದ ಮಾತುಗಳು, ವಿದ್ಯಾಭ್ಯಾಸ, ಅವರ ಮೇಲೆ ಆದಂತಹ ಕೌಟುಂಬಿಕ ಪರಿಸರದ ಪ್ರಭಾವ, ವೈವಾಹಿಕ ಜೀವನ, ಅವರ ಬರಹದ ಪ್ರಕಾರಗಳಾದಂತಹ ಕತೆ, ಕಾದಂಬರಿ, ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ಸಂಪಾದಕತ್ವ, ಅಂಕಣ ಬರಹಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಲಾಗಿದೆ.

'ಕಥಾಸಾಹಿತ್ಯ ಮತ್ತು ಕಾದಂಬರಿ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ' ಎಂಬ ಮೂರನೆಯ ಅಧ್ಯಾಯದಲ್ಲಿ ನೇಮಿಚಂದ್ರ ಅವರ ಬರಹಗಳ ವೈಶಿಷ್ಟ್ಯತೆಯ ಕುರಿತು ವಿವರಿಸಲಾಗಿದೆ. ಓದುಗರು

ಒಬ್ಬ ಲೇಖಕರ ಪುಸ್ತಕಗಳು ಪ್ರಕಟಗೊಳ್ಳುವುದನ್ನು ಕಾತುರದಿಂದ ಕಾಯುತ್ತಿದ್ದಾರೆ ಎಂದರೆ ಆ ಬರಹಗಾರರಲ್ಲಿ ಹಲವು ವಿಶೇಷಗಳಿದ್ದೇ ಇರುತ್ತವೆ. ಇಲ್ಲಿನ ವಿನ್ಯಾಸ ಅಂದರೆ ಆಧುನಿಕತೆಯ ವಿನ್ಯಾಸ, ಸ್ವಾವಲಂಬನೆ, ಆಧುನಿಕ ಬದುಕಿನ ವಿಪರ್ಯಾಸ, ಸಾಂಸ್ಕೃತಿಕ ವಿನ್ಯಾಸ, ಕಥನ ಶೈಲಿಯ ವಿನ್ಯಾಸ ಎಂಬ ನೆಲೆಯಲ್ಲಿ ಉಪ ಶೀರ್ಷಿಕೆಗಳಾಗಿ ವಿಂಗಡಿಸಿಕೊಂಡು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ನೇಮಿಚಂದ್ರ ಅವರ ಸೃಜನಶೀಲ ಸಾಹಿತ್ಯದ ಪ್ರಮುಖ ಕೃತಿಗಳನ್ನು ಅವಲೋಕಿಸಿ ಕನ್ನಡ ಬರಹಗಾರರಲ್ಲೇ ನೇಮಿಚಂದ್ರ ಅವರು ಹೇಗೆ ಭಿನ್ನವಾಗಿ ನಿಲ್ಲುತ್ತಾರೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಕನ್ನಡದಲ್ಲಿ ಮಹಿಳಾ ಪ್ರವಾಸ ಸಾಹಿತ್ಯದ ಕುರಿತು ಸಂಕ್ಷಿಪ್ತವಾಗಿ ತಿಳಿಸಲಾಗಿದೆ ನೇಮಿಚಂದ್ರರ ಪ್ರವಾಸ ಕಥನಗಳ ನೆಲೆ–ಬೆಲೆ, ಪ್ರವಾಸ ಸ್ಥಳಗಳ ಆಯ್ಕೆಯಲ್ಲಿನ ಭಿನ್ನತೆ, ಪ್ರವಾಸಕ್ಕೆ ಪ್ರೇರಣೆ, ತಮ್ಮ ಪಯಣದ ಉದ್ದೇಶ, ಮಹತ್ವದ ಕುರಿತು ಚರ್ಚಿಸಲಾಗಿದೆ. ಇವರ ಮೊದಲ ಪ್ರವಾಸ ಕಥನವಾದ 'ಒಂದು ಕನಸಿನ ಪಯಣ'ದಲ್ಲಿ ಪ್ರವಾಸ ಕೈಗೊಂಡ ಸಂದರ್ಭದಲ್ಲಿನ ಸವಾಲುಗಳೇನು? ಅವುಗಳ ಪರಿಹಾರದ ಉಪಾಯಗಳೇನು? ಎಂಬುದರ ಬಗ್ಗೆ ವಿವರಿಸಲಾಗಿದೆ. ಅಲಕ್ಷಿತ ಕವಿ ಸಮುದಾಯದ ನೆಲೆಗಳನ್ನು ಶೋಧಿಸಿ, ವೈಜ್ಞಾನಿಕವಾಗಿ ಸಾಧನೆಗೈದ ಮಹನೀಯರ ಅದ್ಭುತ ಮಾಹಿತಿಯನ್ನು ಸಂಗ್ರಹಿಸಿ ಈ ಕೃತಿಯಲ್ಲಿ ನೀಡಲಾಗಿದೆ. ಕಲೆ ಹಾಕಿದ ಮಾಹಿತಿಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ವಿವರಣಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಅಧ್ಯಯನದ ದೃಷ್ಟಿಯಿಂದ ಪ್ರವಾಸ ಕಥನದಲ್ಲಿ ಮಹಿಳಾ ಸಾಧಕಿಯರು, ಮಹಿಳಾ ವಿಜ್ಞಾನಿಗಳು, ಮಹಿಳಾ ಸಾಮಾಜಿಕ ಹೋರಾಟಗಾರರು ಎಂಬುದಾಗಿ ವಿಭಾಗಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಿ ಸ್ತ್ರೀ ಪರ ದೃಷ್ಟಿಕೋನದಿಂದ ವಿವರಿಸಲಾಗಿದೆ.

ಇದೇ ಅಧ್ಯಾಯದಲ್ಲಿ 'ಪೆರುವಿನ ಪವಿತ್ರ ಕಣಿವೆಯಲ್ಲಿ'. ಎಂಬ ಅವರ ಎರಡನೆ ಪ್ರವಾಸ ಕಥನದಲ್ಲಿ ಪೆರುವಿನ ಪ್ರವಾಸದ ಕುರಿತು ನೇಮಿಚಂದ್ರರು ಮುಖ್ಯವಾಗಿ ದಾಖಲಿಸಿರುವ ಮಹತ್ವದ ವಿವರಗಳನ್ನು ಚರ್ಚಿಸಲಾಗಿದೆ. ಇದರಲ್ಲಿ ಐತಿಹಾಸಿಕ ಕ್ಷೇತ್ರದಲ್ಲಿ ಸ್ತ್ರೀ, ರಾಜಕೀಯ ಕ್ಷೇತ್ರದಲ್ಲಿ ಸ್ತ್ರೀ ಎಂಬ ವಿಭಾಗದಲ್ಲಿ ಸೂಸನ್ ಹಿಗುಚಿಯು ತನ್ನ ಗಂಡನಾದ ಫ್ಯೂಜಿ ಮೋರಿಯ ಎಂಬ ವ್ಯಕ್ತಿಯ ಭ್ರಷ್ಟಾಚಾರವನ್ನು ಬಯಲಿಗೆಳೆದಿರುವ ಸಂದರ್ಭ ಹಾಗೂ ಆ ದೇಶದ ಮೊಟ್ಟ ಮೊದಲು ಮಹಿಳಾ ಅಧ್ಯಕ್ಷಳಾಗುವ ಕನಸನ್ನು ಕಾಣುತ್ತಾಳೆ. ಫ್ಲಾರೆಸ್ ಇವರು ಅಧ್ಯಕ್ಷ ಸ್ಥಾನದ ವಿರುದ್ಧ ಪುರುಷ

ಧೋರಣೆಯ ವಿರುದ್ಧ ಹೋರಾಡಿದ್ದಾರೆ. ಶೈನಿಂಗ್ ಪಾತ್ ಎಂಬ ಮಹಿಳೆ ಇವರು ಗೋರಿಲ್ಲಾ ಹೋರಾಟಗಾರ್ತಿಯಾಗಿದ್ದು ಮಹಿಳೆಯರ ಹಕ್ಕುಗಳಿಗಾಗಿ ಹೋರಾಟ ಮಾಡಿದ್ದಾರೆ. ಮರಿಯಾ ಎಲೆನಾ ಇವರು ಕಪ್ಪು ಮಹಿಳೆ ಎಂದು ಗುರುತಿಸಿಕೊಂಡಿದ್ದಾರೆ. ಜೊತೆಗೆ 'ಮದರ್ ಕರೇಜ್' ಎಂದು ಪ್ರಸಿದ್ಧಿ ಪಡೆದಿದ್ದಾರೆ. ಇವರು ಪ್ರಜಾತಂತ್ರಕ್ಕಾಗಿ ಸಂಘಟಿತರಾಗಿ ಹೋರಾಟ ಮಾಡಬೇಕೆಂದು ತಿಳಿಸಿಕೊಡುತ್ತಾರೆ. ಮರಿಯಾ ರೇಕಿ ಪೆರುವಿನಲ್ಲಿ ನಾಸ್ಕಾಗೆರೆಗಳ ಉಳಿವಿಗಾಗಿ ಹೋರಾಟ ಮಾಡುತ್ತಾರೆ. ಅಫ್ರಾಬೆನ್ ಗುಲಾಮ ಪದ್ಧತಿಯ ವಿರುದ್ಧ ಧನಿ ಎತ್ತಿದ ಮೊಟ್ಟ ಮೊದಲು ಮಹಿಳೆಯಾಗಿದ್ದಾರೆ. ಪೆರು ದೇಶವು ಐತಿಹಾಸಿಕವಾಗಿ ಮಹತ್ವವನ್ನು ಪಡೆದಿದೆ. ಈ ಅಧ್ಯಾಯದಲ್ಲಿ ಸ್ಪಾನಿಷರು ಬಂದ ಬಗೆ, ಪೆರು ದೇಶದ ಮೂಲದ ಮಾಹಿತಿಯನ್ನು ವಿವರಿಸಲಾಗಿದೆ. ಪೆರು ರಾಜಧಾನಿ ಲೀಮಾದ ಆಚಾರ, ವಿಚಾರ ಭೌಗೋಳಿಕತೆ, ನಾಸ್ಕಾಗೆರೆಗಳ ಬಗ್ಗೆ ವಿವರಿಸಲಾಗಿದೆ. ಐತಿಹಾಸಿಕ ಕ್ಷೇತ್ರದಲ್ಲಿಯ ಮರಿಯಾ ರೇಕಿ ಇವರ ಜ್ಞಾನ ಸಂಶೋಧನೆಯನ್ನು ವಿವರಿಸಲಾಗಿದೆ. ಪೆರುವಿನ ಚಾರಿತ್ರಿಕ ಮಹತ್ವ ಭೌಗೋಳಿಕತೆ, ನಿಸರ್ಗ ಸೌಂದರ್ಯ, ಸಾಂಸ್ಕೃತಿಕ ಪರಂಪರೆ, ಪೆರುವಿನ ನೆಲದಲ್ಲಿನ ಸ್ತ್ರೀ ಸಂವೇದನೆಯ ಮಜಲುಗಳನ್ನು ಗುರುತಿಸಿ ವಿವರಿಸಲಾಗಿದೆ.

'ಜೀವನ ಚರಿತ್ರೆ ಸಾಹಿತ್ಯಕ್ಕೆ ನೇಮಿಚಂದ್ರ ಅವರ ಕೊಡುಗೆ' ಎಂಬ ಐದನೆಯ ಅಧ್ಯಾಯದಲ್ಲಿ ಮಹಿಳೆಯರ ಕುರಿತಾದ ಜೀವನ ಚರಿತ್ರೆ ಎಂಬ ಉಪಶೀರ್ಷಿಕೆಯನ್ನು ಮಾಡಿಕೊಂಡು ಅದರಲ್ಲಿ ನೇಮಿಚಂದ್ರ ಅವರು ಸಾಧಕ ಮಹಿಳೆಯರ ಜೀವನದ ಕುರಿತಾಗಿ ಬೆಳಕಿಗೆ ತಂದ ವಿಷಯಗಳನ್ನು ವಿವರಿಸಲಾಗಿದೆ. ಮೊದಲಿಗೆ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡಿದಂತಹ ಬೆಳೆಗೆರೆ ಜಾನಕಮ್ಮ ಅವರ ಬಗ್ಗೆ ಚರ್ಚಿಸಲಾಗಿದೆ. ರಾಸಾಯನಿಕ ವಿಜ್ಞಾನ ಮತ್ತು ಭೌತವಿಜ್ಞಾನ ಎರಡು ವಿಷಯಗಳಲ್ಲಿ ನೋಬೆಲ್ ಪಡೆದಂತಹ ಮೇರಿ ಕ್ಯೂರಿಯ ಕುರಿತು ವಿವರಿಸಲಾಗಿದೆ. ಸಾಮಾಜಿಕ ಹೋರಾಟಗಾರ್ತಿಯಾದ ಭಾಂವ್ರಿದೇವಿ, ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಫ್ಲೇವಿಯಾ, ವೈದ್ಯಲೋಕಕ್ಕೆ ಅಮೋಘ ಕೊಡುಗೆಯನ್ನು ನೀಡಿದ ಡಾ॥ ಈಡಾಸ್ಕಡರ್ ಅವರ ಬಗ್ಗೆ ವಿಶ್ಲೇಷಿಸಲಾಗಿದೆ. ಪ್ರಾಣಿತಜ್ಞೆಯಾಗಿ ಸಂಶೋಧನೆಗಳನ್ನು ಮಾಡಿದಂತಹ ಜೇನ್ ಗುಡಾಲ್ ಕುರಿತು ಚರ್ಚಿಸಲಾಗಿದೆ. ಹೋರಾಟದ ಹಾದಿಯಲ್ಲಿ ಧೀರ ಮಹಿಳೆಯರು ಎಂಬ ಭಾಗದಲ್ಲಿ ಗುಲಾಮಿ ಪದ್ಧತಿಯ ವಿರುದ್ಧ ಹೋರಾಡಿದಂತಹ ಅಫ್ರಾಬೆನ್, ಸೆನೆಕಾ ಫಾಲ್ಸ್, ಜಾರ್ಜ್‌ಸ್ಯಾಂಡ್, ಆಂಗ್

ಸಾನ್ ಸೂಕಿ, ಕೋನಿ, ರೂಪನ್ ಬಜಾಜ್ ಅವರ ಕುರಿತು ಜೀವನ ಚರಿತ್ರೆಯನ್ನು ಬರೆದು ಮಹಿಳೆಯರಲ್ಲಿ ಉತ್ಸಾಹವನ್ನು ತುಂಬಲು ಪ್ರಯತ್ನಿಸಿದ್ದಾರೆ.

ಮಹಿಳಾ ವಿಜ್ಞಾನಿಗಳು ಎಂಬ ವಿಭಾಗ ಮಾಡಿಕೊಂಡು, ಅದರಲ್ಲಿ ಅಧ್ಯಯನದ ಹಿತದೃಷ್ಟಿಯಿಂದ ಮತ್ತೆರಡು ಭಾಗಗಳನ್ನಾಗಿ ಮಾಡಿಕೊಳ್ಳಲಾಗಿದೆ. ದೇಶೀಯ ಮಹಿಳಾ ವಿಜ್ಞಾನಿಗಳಾದಂತಹ ಡಾ. ರಾಜೇಶ್ವರಿ ಚಟರ್ಜಿ, ಡಾ. ಕಸ್ತೂರಿ, ಡಾ. ಭವಾನಿ ಬೆಳವಾಡಿ, ಡಾ. ಎಚ್.ವಿ.ಸಾವಿತ್ರಿ, ಡಾ. ಸಂಧ್ಯಾ ವಿಶ್ವೇಶ್ವರಯ್ಯ, ಡಾ. ವಿ. ಶುಭಾ, ಡಾ. ಪಾರ್ವತಿ ಗೋಪಾಲ್. ವಿದೇಶಿಯ ಮಹಿಳಾ ವಿಜ್ಞಾನಿಗಳಾದಂತಹ ಲವೋಸಿಯರ್ ಮೇರಿ, ಜರ್ಮನಿಯ ಹೈಲ್ಡ್‌ಗಾರ್ಡ್, ಗಣಿತಜ್ಞೆ ಹಿಪಾಟಿಯಾ. ಫ್ರಾನ್ಸ್‌ನ ಗಣಿತಜ್ಞೆ ಮತ್ತು ಭೌತಶಾಸ್ತ್ರ ವಿಷಯದಲ್ಲಿ ಹೆಸರುವಾಸಿಯಾಗಿದ್ದ ಎಮಿಲಿದು ಶಾಟಲೆ, ಜರ್ಮನಿಯ ವಿಜ್ಞಾನಿ ಕ್ಯಾರೊಲಿನ್ ಹರ್ಷಲ್, ರಷಿಯನ್ ಇಂಪೀರಿಯಲ್ ವಿಜ್ಞಾನ ಅಕಾಡೆಮಿಗೆ ಮೊದಲ ಮಹಿಳೆಯಾಗಿ ಚುನಾಯಿತಳಾದ ಸೋನ್ಯಾ ಕೋವಲೇವ್ಸ್ಕಯಾ, ಗಣಿತ ವಿಜ್ಞಾನಿ ಲೀ ಮೇಟ್ನರ್, ಜರ್ಮನಿಯ ಮರಿಯಾ ರೇಕಿಯು, ಭೌತಶಾಸ್ತ್ರ, ರಾಸಾಯನಶಾಸ್ತ್ರ ಮತ್ತು ಅಣುಶಾಸ್ತ್ರಕ್ಕೆ ವಿಶೇಷ ಕೊಡುಗೆ ನೀಡಿದಂತಹ ರೋಸಲಿಂಡ್ ಎಲ್ಸೀ ಫ್ರಾಂಕ್ಲಿನ್, ಇತಾಲೊಜಿ ವಿಭಾಗಕ್ಕೆ ಕೊಡುಗೆ ನೀಡಿದ ಜೆನ್ ಗುಡಾಲ್, ಸಮುದ್ರದಾಳದಲ್ಲಿ ವಾಸವಾಗಿರುವ 'ಕಡಲ ಕುದುರೆ' ಮೀನುಗಳ ಬಗೆಗೆ ಸಂಶೋಧನೆ ನಡೆಸಿದಂತಹ ಪ್ರಾಣಿಶಾಸ್ತ್ರಜ್ಞೆ ಅಮುಂಡಾ ವಿನ್ಸೆಂಟ್, ವೈದ್ಯರಂಗದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಪ್ರಥಮ ಮಹಿಳೆಯಾದಂತಹ ಗರ್ಟಿ ತೆರೇಸಾ ಕೋರಿ, ಜರ್ಮನಿಯ ಮರಿಯಾ ಗೋಪರ್ಟ್ ಮೇಯರ್, 'ಪರಮಾಣು ರಚನೆ'ಯನ್ನು ಕಂಡು ಹಿಡಿದಂತಹ ಡರೋತಿ ಕ್ರೊಫುಟ್ ಹಾಜ್ಕಿನ್ ಅಮೆರಿಕಾದ ನ್ಯೂಕ್ಲಿಯರ್ ಭೌತಶಾಸ್ತ್ರಜ್ಞೆ ರೋಸಲಿನ್ ಯಾಲೋ, ಅಮೆರಿಕಾದ ಪ್ರಸಿದ್ಧ ಸಸ್ಯ ಜೀವಶಾಸ್ತ್ರಜ್ಞೆ ಬಾರ್ಬರ ಮ್ಯಾಕ್ ಕ್ಲಿಂಟಾಕ್, ಗರಟ್ರೂಡ್ ಇಲಿಯನ್, ಜರ್ಮನಿಯ ಜೀವಶಾಸ್ತ್ರ ವಿಜ್ಞಾನಿ ಕ್ರಿಸ್ಟೀನ್ ನುಸ್‌ಲಾಯ್ನ್ ವೋಲ್‌ಹಾರ್ಡ್. ಮಹಿಳಾ ವೈಮಾನಿಕ ಕ್ಷೇತ್ರದಲ್ಲಿ ಹೆಸರು ಮಾಡಿರುವ 'ತೇರೇಸ್ ಪೆಲ್ಟಿಯಾರ್, ಏಮಿ ಜಾನ್ಸನ್, ಜೀನ್ ಬ್ಯಾಟನ್, ಹ್ಯಾನಾ ರೈಶ್, ಶೈಲಾ ಸ್ಕಾಟ್. ಇನ್ನೂ ಹಲವಾರು ಜನರ ಬಗ್ಗೆ ಜೀವನ ಚರಿತ್ರೆಯನ್ನು ಬರೆದು ಅವರನ್ನು ಕನ್ನಡಕ್ಕೆ ಪರಿಚಯಿಸಿದ್ದಾರೆ.

'ನೇಮಿಚಂದ್ರ ಅವರ ಅಂಕಣ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ' ಎಂಬ ಆರನೇ ಅಧ್ಯಾಯದಲ್ಲಿ ಕನ್ನಡದಲ್ಲಿ ಅಂಕಣ ಸಾಹಿತ್ಯ ಮಹಿಳೆಯರ ಅಂಕಣ ಸಾಹಿತ್ಯದ ಕುರಿತು

ವಿವರಿಸಲಾಗಿದೆ. ನೇಮಿಚಂದ್ರ ಅವರ ಅಂಕಣಗಳಲ್ಲಿ ಮಹಿಳೆ ಮತ್ತು ಆರೋಗ್ಯ ಕುರಿತಾದ ಬರಹಗಳ ಉಪ ಶೀರ್ಷಿಕೆಯಲ್ಲಿ ಅನುಪಮಾ ನಿರಂಜನರ ಕ್ಯಾನ್ಸರ್‌ನಿಂದ ಬಳಲುತ್ತಿದ್ದರೂ 'ಆಳ', 'ಮೂಲಮುಖಿ', 'ಮುಕ್ತಿಚಿತ್ರ', ಕಾದಂಬರಿಗಳನ್ನು ಬರೆದಿದ್ದಾರೆ. ಒಬ್ಬರೇ ಯುರೋಪ್, ಅಮೆರಿಕ, ಪ್ರವಾಸವನ್ನು ಮಾಡಿದ್ದಾರೆ. ಕರುಳು ಕ್ಯಾನ್ಸರ್ ರೋಗದಿಂದ ಹೋರಾಡಿದ ಕುಸುಮ ಅವರ ಬಗ್ಗೆಯೂ ವಿವರಿಸಿದ್ದಾರೆ. ಲೈಂಗಿಕ ವೃತ್ತಿನಿರತರ ಕಥೆ ವ್ಯಥೆಯನ್ನು ಇವರು 'ಕಾಯದ ಕಾರ್ಪಣ್ಯ', 'ಮಣ್ಣಿಂದ ಎದ್ದವರು' ಎಂಬ ಕಾದಂಬರಿಯನ್ನು ಹಾಗೂ ಉದಯವಾಣಿ ಪತ್ರಿಕೆಗೆ 'ಮಟಗಳ ನಡುವಿನ ನವಿಲುಗರಿ' ಎಂಬ ಅಂಕಣವನ್ನು ಬರೆದಿದ್ದಾರೆ. ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಾ ಕಮಲಮ್ಮ ಅವರಿಗೆ ಮೂತ್ರಪಿಂಡದಲ್ಲಿ ಕಲ್ಲು ಕಾಣಿಸಿಕೊಂಡ ವಿಷಯವನ್ನು ತಿಳಿಸಿದ್ದಾರೆ. 'ಟಾಪ್ ಅಮೇರಿಕನ್ ಫ್ಯಾಷನ್ ಡಿಸೈನರ್' ಎಂದು 1970ರ ದಶಕದಲ್ಲಿ ಗುರುತಿಸಲ್ಪಟ್ಟ ಮಾಯಾ ತಿವಾರಿ. ಅವರು ಕೇವಲ 23 ವರ್ಷದಲ್ಲಿ ತೀವ್ರವಾದ ಕ್ಯಾನ್ಸರ್ ರೋಗಕ್ಕೆ ಬಲಿಯಾದ ಇವರು ಹನ್ನೆರಡು ಬಾರಿ ಶಸ್ತ್ರ ಚಿಕಿತ್ಸೆ, ಲೆಕ್ಕವಿಲ್ಲದಷ್ಟೂ ರೇಡಿಯೇಷನ್ ಥೆರಪಿ ಮಾಡಿಸಿಕೊಂಡು ಹೋರಾಡಿದ ಅವರ ದಿಟ್ಟತನದ ಬಗ್ಗೆ ತಿಳಿಸುತ್ತಾರೆ. ತೀವ್ರ ರೀತಿಯಾದ ರೋಗದಿಂದ ಗುಣಮುಖವಾದ ಬಗೆಯನ್ನು ತಮ್ಮ 'ದಿ ಪಾತ್ ಆಫ್ ಪ್ರಾಕ್ಟೀಸ್' ಎಂಬ ಪುಸ್ತಕದಲ್ಲಿ ದಾಖಲಿಸಿದ್ದಾರೆ.

ಮೆದುಳಿನ ವಿಜ್ಞಾನಿ ಜಿಲ್‌ಬೋಲ್ಟೆ ಅವರ ಕುರಿತು ಮಾಹಿತಿಯನ್ನು ತಿಳಿಸುತ್ತಾರೆ. ಮೆದುಳಿನಲ್ಲಿ ಸಣ್ಣ ಚೆಂಡಿನ ಅಳತೆಯ 'ಕ್ಲಾಟ್' ಆಗಿ ಲಕ್ವ ಹೊಡೆದಿರುತ್ತದೆ. ಸಂಪೂರ್ಣ ಎಲ್ಲಾ ವಿಷಯವನ್ನು ಮರೆತಂತಹ ತಮ್ಮ ಮೆದುಳಿಗೆ ಮತ್ತೆ ಎಲ್ಲವನ್ನು ಕಲಿಸಿದ ಕುರಿತು ತಾವು ಗುಣವಾದ ವಿಚಾರವನ್ನು ತಿಳಿಸಿಕೊಡುತ್ತಾರೆ. ಇವರು ತಮ್ಮ ಮೆದುಳಿನ ಕತೆಯನ್ನು 'ಮೈ ಸ್ಟ್ರೋಕ್ ಆಫ್ ಇನ್‌ಸೈಟ್-ಬ್ರೈನ್ ಸೈಂಟಿಸ್ಟ್ಸ್ ಪರ್ಸನಲ್ ಜರ್ನಿ' ಎಂಬ ಪುಸ್ತಕದಲ್ಲಿ ಹಂಚಿಕೊಂಡಿದ್ದಾರೆ. ರಕ್ಷಣಾ ದಳದ ಸಂಶೋಧನಾ ಪ್ರಯೋಗ ಶಾಲೆಯಲ್ಲಿ ಉನ್ನತ ಹುದ್ದೆಯಲ್ಲಿದ್ದಂತಹ ವಿಜ್ಞಾನಿ ಡಿ. ಎಂ. ರೇಣುಕಾ ಅವರು ಸ್ತನದ ಕ್ಯಾನ್ಸರ್‌ಗೆ ಗುರಿಯಾಗಿದ್ದು, ಅದರಿಂದ ಗೆದ್ದು ಬಂದ ಬಗೆಯನ್ನು ತಿಳಿಸಿದ್ದಾರೆ. ವೀಣಾ ಪಾಠಕ್ ಅವರು ಅಂಡಾಶಯದ ಕ್ಯಾನ್ಸರ್‌ನಿಂದ ಚೇತರಿಸಿಕೊಳ್ಳುತ್ತಿರುವ ಮಹಿಳೆಯಾಗಿದ್ದು, ಅವರು ಗುಣಮುಖರಾಗಿರುವ ಸ್ಫೂರ್ತಿದಾಯಕವಾದ ವಿಷಯದ ಬಗ್ಗೆ ವಿವರಿಸಲಾಗಿದೆ.

ಸಾಮಾಜಿಕ ಚಿಂತನೆಯುಳ್ಳ ಬರಹಗಳಲ್ಲಿ ಪ್ರಸ್ತುತ ಜೀವನದಲ್ಲಿ ಎಲ್ಲ ತಂದೆ ತಾಯಿಗಳು ಮಕ್ಕಳ ಮೇಲೆ ಗೆಲ್ಲುವುದಕ್ಕಾಗಿ ಅವರ ಮೇಲೆ ತಂದೊಡ್ಡುವ ಒತ್ತಡಗಳನ್ನು ಚರ್ಚಿಸಲಾಗಿದೆ. ರೋಸಾ ಪಾರ್ಕ್ ಅವರು ಅಮೆರಿಕದ ವರ್ಣಭೇದದ ನಿಯಮದ ವಿರುದ್ಧ ಹೋರಾಡಿ ಎಲ್ಲರಿಗೂ ನ್ಯಾಯ ದೂರಕಿಸಿ ಕೊಟ್ಟ ಬಗ್ಗೆ ವಿವರಿಸಲಾಗಿದೆ. ಕೌಟುಂಬಿಕ ಹಿಂಸೆಯಿಂದ ಮೇಲೆದ್ದು ಪ್ರಸಿದ್ಧ ನ್ಯಾಯವಾದಿಯಾಗಿ ಬೆಳೆದಂತಹ ಫ್ಲೇಮಿಯಾ ಅವರ ಬಗ್ಗೆ ತಿಳಿಸಿಕೊಡಲಾಗಿದೆ. ಕಿನ್ಯಾದ ಪರಿಸರವಾದಿಯಾಗಿ, ನೊಬೆಲ್ ಶಾಂತಿ ಪುರಸ್ಕಾರ ಪಡೆದ ಮೊದಲ ಮಹಿಳೆಯಾಗಿರುವ ಡಾ. ವಂಗಾರ್ಯಿ ಮಟ್ಟೈ ಅವರ ಕುರಿತು ಚರ್ಚಿಸಲಾಗಿದೆ. ದೀಪಾ ಮಲ್ಲಿಕ್ ತನ್ನ ಅಂಗವಿಕಲತೆಯನ್ನು ಗೆದ್ದು ಅಪ್ರತಿಮ ಸಾಧನೆಯನ್ನು ಮಾಡಿರುವುದರ ಬಗ್ಗೆ ತಿಳಿಸಿದ್ದಾರೆ. ನೆಹರು ಹೆಂಡತಿಯಾದ ಕಮಲಾ ಅವರ ದಿಟ್ಟತನದ ಬಗ್ಗೆ ವಿವರಿಸಲಾಗಿದೆ. ಜೀವನೋತ್ಸಾಹ ತುಂಬುವ ಬರಹಗಳು ಎಂಬ ಭಾಗದಲ್ಲಿ ಮಹಿಳೆಯರಿಗೆ ಸ್ಫೂರ್ತಿಯನ್ನು ನೀಡುವ ಬರಹಗಳನ್ನು ಉಲ್ಲೇಖಿಸಲಾಗಿದೆ. ಇದರಲ್ಲಿ ಕೊಳ್ಳುಬಾಕ ಸಂಸ್ಕೃತಿಯ ಬಗ್ಗೆ ವಿವರಿಸಲಾಗಿದ್ದು ವಿದೇಶಿ ವಸ್ತು, ಜೀವನ ಕ್ರಮವನ್ನು ಅನುಸರಿಸುತ್ತಿರುವ ಪರಿಣಾಮದ ಬಗ್ಗೆ ವಿವರಿಸಲಾಗಿದೆ. ಪೌಷ್ಟಿಕಾಂಶದ ಕೊರತೆ, ಪಾಶ್ಚಾತ್ಯ ಅಂಧ ಅನುಕರಣೆಯನ್ನು ಮಾಡುತ್ತಿರುವ ಬಗ್ಗೆ ತಿಳಿಸಲಾಗಿದೆ. ಹೆಣ್ಣು ಮಕ್ಕಳ ಮೇಲೆ ಯಾವ ರೀತಿ ಪ್ರಭಾವ ಬೀರುತ್ತದೆ ಹಾಗೂ ಮಹಿಳೆಯರು ಅನುಭವಿಸುತ್ತಿರುವ ರಕ್ತ ಹೀನತೆಯ ಬಗ್ಗೆ ವಿವರಿಸಲಾಗಿದೆ. ಸುತ್ತಲಿನ ಪರಿಸರದ ಜ್ಞಾನದೊಂದಿಗೆ ಡಾ. ಬರ್ನಿ ಸೇಗಲ್ ಅವರ 'ಪೀಸ್ ಲವ್ ಅಂಡ್ ಹೀಲಿಂಗ್' ಪುಸ್ತಕದ ಮಾಹಿತಿಯನ್ನು ತಿಳಿಸಲಾಗಿದೆ.

ಹೆಣ್ಣಿನ ಸಮಸ್ಯೆಗಳಿಗೆ ಮೂಲ ಎಲ್ಲಿದೆ ಎನ್ನುವ ಹುಡುಕಾಟವು, ಸ್ಥಿರ ಮೌಲ್ಯಗಳನ್ನು ವಿಶೇಷವಾಗಿ ಪುರುಷ ಪ್ರಧಾನ ಸಮಾಜ ಸ್ಥಾಪಿಸಿದ ಮೌಲ್ಯಗಳನ್ನು ಪ್ರಶ್ನಿಸುತ್ತದೆ. ಮಾತ್ರವಲ್ಲದೆ ಹೊಸದೊಂದು ಲಿಂಗ ಸಮಾನತೆಯ ವೈಚಾರಿಕ ಲೋಕವನ್ನು ಕಟ್ಟುವಂತಹ, ಎಲ್ಲಾ ಪ್ರಯತ್ನಗಳೆಡೆಗೆ ಮುಖಮಾಡಿ ನಿಂತು ಬೆಳೆಯುತ್ತಿರುವುದನ್ನು ಗಮನಿಸಬಹುದಾಗಿದೆ. ಅಂತಹ ಹಲವು ವಿಚಾರಗಳು ಸಂವೇದನೆಗಳು ನೇಮಿಚಂದ್ರ ಅವರ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಸ್ತ್ರೀಯರ ಸಂವೇದನಶೀಲತೆ ಹೆಚ್ಚುತ್ತಾ ಹೋದಂತೆಲ್ಲ, ಅವರು ಸಮಾಜವನ್ನು ಕಾಣುವ ದೃಷ್ಟಿಯೂ ಚುರುಕುಗೊಳ್ಳುತ್ತದೆ ಎನ್ನುವುದಕ್ಕೆ ನೇಮಿಚಂದ್ರವರ ಸಾಹಿತ್ಯವೇ ಸಾಕ್ಷಿಯಾಗಿದೆ. ಕನ್ನಡದಲ್ಲಿ ಹಲವು ದಶಕಗಳಿಂದಲೂ ಗುರುತಿಸಿಕೊಂಡಿರುವ ನೇಮಿಚಂದ್ರ ಅವರು ಸಾಹಿತ್ಯ ರಚನೆಯ ಮಾನದಂಡಗಳ ದೃಷ್ಟಿಯಿಂದ

ಯಾವ ಕಾಲಘಟ್ಟಗಳ ಪ್ರಭಾವಕ್ಕೂ ಒಳಗಾಗದವರು ಹಾಗೇ ಸಹೃದಯಶೀಲ ವ್ಯಕ್ತಿತ್ವದವರು. ನೇಮಿಚಂದ್ರರವರ ಸಮಗ್ರ ಸಾಹಿತ್ಯದ ಸಂಶೋಧನೆಯ ಫಲಿತಗಳು ಹೀಗಿವೆ.

- ನೇಮಿಚಂದ್ರರವರ ಬರಹಗಳಲ್ಲಿ ಪುರುಷ ಪ್ರಧಾನ ಸಮಾಜದಲ್ಲಿನ ಪುರುಷರ ದಬ್ಬಾಳಿಕೆ, ಬಲವಂತದ ಹೇರಿಕೆಗಳ ಬಗ್ಗೆ ಬರವಣಿಗೆಯಲ್ಲಿ ಅಸಮಾಧಾನವಿದೆಯೇ ಹೊರತು ಆಕ್ರೋಶವಿಲ್ಲ ಎಂಬುದನ್ನು ಕಂಡುಕೊಳ್ಳಲಾಗಿದೆ.
- ಯಾವುದೇ ಪ್ರದೇಶವಾಗಲಿ ಅಥವಾ ದೇಶವಾಗಲಿ, ಅಲ್ಲಿ ಹೆಣ್ಣಿನ ಶೋಷಣೆಯು ಪುರುಷರ ಹೇರಿಕೆಯ ನೀತಿ ಎಂಬುದು ನೇಮಿಚಂದ್ರರವರ ಅಭಿಪ್ರಾಯವಾಗಿದೆ.
- ನೇಮಿಚಂದ್ರ ಅವರು ವಿಜ್ಞಾನ ಕ್ಷೇತ್ರದವರಾಗಿದ್ದು, ಇವರ ಸಾಹಿತ್ಯದಲ್ಲಿ ವೈಜ್ಞಾನಿಕ ಮತ್ತು ವೈಚಾರಿಕತೆಯ ನಿಲುವುಗಳನ್ನು ಕಾಣಬಹುದಾಗಿದೆ.
- ನೇಮಿಚಂದ್ರ ಅವರು ಹೆಣ್ಣಿನ ಶೋಷಣೆಯ ವಿವಿಧ ಸೂಕ್ಷ್ಮಗಳನ್ನು ಹಾಗೂ ಹೆಣ್ಣಿನ ಬಗೆಗೆ ಪುರುಷ ಪ್ರಧಾನ ದೃಷ್ಟಿಕೋನ ಜಾಗತಿಕ ಮಟ್ಟದಲ್ಲಿ ಹೇಗಿದೆ ಎಂಬುದನ್ನು ತಿಳಿಸಿರುವುದನ್ನು ಕಂಡುಕೊಳ್ಳಲಾಗಿದೆ.
- ನೇಮಿಚಂದ್ರ ಅವರು ತಮ್ಮ ಬದುಕಿನುದ್ದಕ್ಕೂ ಕಥೆಗಳನ್ನು ಕೇಳಿಕೊಂಡು ಬೆಳೆದಿದ್ದಾರೆ. ಹಾಗಾಗಿ ಕಥನ ಸಾಹಿತ್ಯ ಅವರಿಗೆ ಕರಗತವಾದುದನ್ನು ಗುರುತಿಸಲಾಗಿದೆ.
- ಹೆಣ್ಣು ಗಂಡಿಗೆ ಸಮಾನಳಾಗಿ, ಮನುಷ್ಯಳಾಗಿ ಬಾಳಬೇಕಾದರೆ ಆಕೆಗೆ ಶಿಕ್ಷಣ ನೀಡಬೇಕು, ಆಕೆ ಆರ್ಥಿಕವಾಗಿ ಸ್ವಾವಲಂಬನೆಯಾಗಬೇಕು ಎಂಬುದು ಅವರ ಕೃತಿಗಳಲ್ಲಿನ ಆಶಯವಾಗಿದೆ.
- ನೇಮಿಚಂದ್ರ ಅವರು ಹೆಣ್ಣಿನ ಬದುಕನ್ನು ಸ್ವತಃ ಹೆಣ್ಣೆ ಬದಲಿಸಬೇಕು, ಹೆಣ್ಣಿನ ಪಾತ್ರವನ್ನು ಹೆಣ್ಣೆ ಬರೆಯಬೇಕು, ಬದಲಾಯಿಸಬೇಕು ಎಂಬುದನ್ನು ತಿಳಿಸುತ್ತಾರೆ.
- ಮಹಿಳೆ ಪರಂಪರಾಗತ ಪುರುಷ ದೃಷ್ಟಿಕೋನದಿಂದ ಹೊರಬಂದು ಅವಳು ಅತಿಯಾದ ಲಜ್ಜೆ, ನಾಜೂಕು, ಒನಪು, ಒಯ್ಯಾರ, ಪರಾಧೀನರ ಉತ್ಪ್ರೇಕ್ಷೆ ಬಿಟ್ಟು ಗಂಡಿನಷ್ಟೆ ಸಹಜವಾಗಬೇಕು ಎಂಬುದನ್ನು ಪ್ರತಿಪಾದಿಸಿದ್ದಾರೆ.
- ನೇಮಿಚಂದ್ರ ಅವರು ಪ್ರಕೃತಿಪ್ರಿಯರಾಗಿದ್ದು ಪರಿಸರ ರಕ್ಷಣೆಯ ಬಗ್ಗೆ ಆಸಕ್ತಿ ಹೊಂದಿದವರಾಗಿದ್ದಾರೆ. ಇವರು ನಮ್ಮದೇ ಮಣ್ಣಿನಲ್ಲಿ ಬೆಳೆದು ತಂದ ಸಹಜ

ಆಹಾರಗಳು, ಹಣ್ಣು, ತರಕಾರಿ, ರಾಸಾಯನಿಕ ಮುಕ್ತ ಆಹಾರ ಅದರ ನೈಜ ಗುಣದ ಬಗ್ಗೆ ತಿಳಿಸುತ್ತಾರೆ.

- ನಮ್ಮಲ್ಲಿಯೇ ಇರುವಂತಹ ಆಹಾರ ಪದಾರ್ಥಗಳು ಅದರ ಔಷಧೀಯ ಗುಣಗಳು ಅದರಿಂದ ಉಂಟಾಗುವ ಪ್ರಯೋಜನಗಳ ಕುರಿತು ವಿವರಣೆಯನ್ನು ನೀಡಿದ್ದಾರೆ.
- ನೇಮಿಚಂದ್ರ ಅವರು ತಾವು ಕೈಗೊಂಡ ಪ್ರವಾಸ ಸಾಹಿತ್ಯದಲ್ಲಿ ತಮ್ಮದೇ ಉದ್ದೇಶವನ್ನು ಗುರಿಯನ್ನು ಹೊಂದಿದ್ದಾರೆ. ಇವರು ಆಯ್ಕೆ ಮಾಡಿಕೊಂಡ ವಿಷಯದ ಬಗ್ಗೆ ಹೆಚ್ಚಿನ ಅಧ್ಯಯನಕ್ಕಾಗಿ ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ಸಂಶೋಧನೆಯನ್ನು ಕೈಗೊಂಡಿರುತ್ತಾರೆ.
- ಮಹಿಳೆಯರನ್ನೇ ಕೇಂದ್ರವಾಗಿರಿಸಿಕೊಂಡು ಇವರು ಮಕ್ಕಳು, ವಿಜ್ಞಾನಿಗಳು, ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿಗಳು ಹಾಗೂ ವಿವಿಧ ಕ್ಷೇತ್ರದಲ್ಲಿ ಹೋರಾಟ ಮಾಡಿದಂತೆ ಮಹಿಳೆಯರನ್ನು ಕುರಿತು ವೈಜ್ಞಾನಿಕ ಮಾಹಿತಿಯನ್ನು ನೀಡಿದ್ದಾರೆ.
- ಪ್ರಾಚೀನ ಕಾಲದಿಂದಲೂ ಮಹಿಳೆಯರ ಮೇಲೆ ಹೇರಲ್ಪಟ್ಟ ಸಂಪ್ರದಾಯ ಆಚಾರ ಪದ್ಧತಿಗಳು ಯಾವ ರೀತಿ ಅಧೀನಳನ್ನಾಗಿಸಿವೆ. ಹಾಗೆಯೇ ಅದರಿಂದ ಹೇಗೆ ಹೊರಬಂದು ಸಾಧನೆ ಮಾಡಿದ್ದಾರೆ ಎಂಬುದನ್ನು ಗುರುತಿಸಿದ್ದಾರೆ.
- ನೇಮಿಚಂದ್ರ ಅವರು ತಮ್ಮ ಅಂಕಣ ಸಾಹಿತ್ಯದಲ್ಲಿ ಜೀವನ ಉತ್ಸಾಹ ತುಂಬುವ ವಿಚಾರಗಳನ್ನು ತಿಳಿಸಿದ್ದಾರೆ. ಸಾವು ಬದುಕಿನ ಹೋರಾಟದಲ್ಲಿ ಗೆಲ್ಲುವ ಹೋರಾಡುವ ಬಗೆಯನ್ನು ತಿಳಿಸಿದ್ದಾರೆ.
- ಮಹಿಳೆ ವಿದ್ಯಾವಂತಳೂ, ಉದ್ಯೋಗವಂತಳಾದಂತೆ ತನ್ನ ಕುಟುಂಬದ ಒಳಗಿನ ಮತ್ತು ಹೊರಗಿನ ಜವಾಬ್ದಾರಿಗಳು ಏನು, ಅದನ್ನು ಹೇಗೆ ಪರಿಹರಿಸಬೇಕು ಎಂಬುದನ್ನು ವಿವರಿಸಿದ್ದಾರೆ. ಈ ದ್ವಿಪಾತ್ರಗಳು ದೈಹಿಕ ಮತ್ತು ಮಾನಸಿಕ ಒತ್ತಡಕ್ಕೆ ಕಾರಣವಾಗಿರುವುದನ್ನು ತಿಳಿಸುತ್ತಾರೆ.
- ಇಂದಿನ ದಿನಗಳಲ್ಲಿ ಮಹಿಳೆಯರ ಆರೋಗ್ಯ ಸಮಸ್ಯೆಗಳು, ಕ್ಯಾನ್ಸರ್ ಮತ್ತಿತರ ಸಮಸ್ಯೆಗಳನ್ನು ಕುರಿತು ಸವಿವರವಾಗಿ ತಿಳಿಸುತ್ತಾರೆ. ಇಂತಹ ಕಾಯಿಲೆಯಿಂದ

ಗೆದ್ದಂತಹ ಮಹಿಳೆಯರನ್ನು ಕುರಿತು ವಿವರಿಸಿ ಎಲ್ಲರಲ್ಲೂ ಆತ್ಮವಿಶ್ವಾಸ ಮೂಡಿಸುತ್ತಾರೆ.

- ಮಹಿಳೆಯರ ಮೇಲಾಗುತ್ತಿರುವ ಲೈಂಗಿಕ ದೌರ್ಜನ್ಯ ಸಮಾಜದಲ್ಲಿನ ಅನೇಕ ಅಪರಾಧಗಳು ಅವ್ಯವಸ್ಥೆಯನ್ನು ಕುರಿತು ತಿಳಿಸುತ್ತಾರೆ.
- ಶಿಕ್ಷಣಕ್ಕಾಗಿ ಹೋರಾಟ ಮಾಡಿ ಶಿಕ್ಷಣ ಪಡೆದಂತಹ ಅನೇಕ ಮಹಿಳೆಯರು ಯಾವ ರೀತಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾರೆ. ಆ ಮೂಲಕ ಸಮಾಜಕ್ಕೆ ಯಾವ ರೀತಿ ಪ್ರೇರಣೆಯಾಗಿದ್ದಾರೆ ಎಂಬುದನ್ನು ತಿಳಿಸುತ್ತಾರೆ.
- ನೇಮಿಚಂದ್ರ ಅವರು ಪುರುಷರಾಗಲಿ, ಸ್ತ್ರೀಯರಾಗಲಿ ಯಾವುದೇ ಸಮಸ್ಯೆಗೆ ಒಳಗಾಗಿದ್ದರೂ ಅವರಿಂದ ಹೊರಬಂದು ತಮ್ಮ ಬದುಕನ್ನು ರೂಪಿಸಿಕೊಂಡಿರುವುದರ ಬಗ್ಗೆ ಅವರ ಬರಹಗಳಲ್ಲಿ ಸಾಧನೆಯ ವಿವಿಧ ಮೆಟ್ಟಿಲುಗಳ ಹಾದಿಯನ್ನು ತಿಳಿಸುತ್ತಾರೆ.
- ನೇಮಿಚಂದ್ರ ಅವರು ಅತ್ಯಂತ ಸರಳ ಸಜ್ಜನಿಕೆಯ ವ್ಯಕ್ತಿತ್ವದವರು, ಸಮಾಜಮುಖಿಯ ಕಳಕಳಿಯುಳ್ಳವರಾಗಿದ್ದು, ಬಡವರಿಗೆ, ದುರ್ಬಲರಿಗೆ ಸಹಾಯವನ್ನು ಮಾಡುವುದರ ಜೊತೆಗೆ ಅವರ ಕುಟುಂಬಕ್ಕೆ ಆರ್ಥಿಕ ನೆರವನ್ನು ನೀಡಿ ಅವರನ್ನು ಸಬಲರನ್ನಾಗಿಸಿದ್ದಾರೆ.

8. ಮುಂದಿನ ಅಧ್ಯಯನದ ಸಾಧ್ಯತೆಗಳು

"ನೇಮಿಚಂದ್ರರವರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆ" ಎನ್ನುವ ಈ ಸಂಶೋಧನಾ ಮಹಾಪ್ರಬಂಧದಲ್ಲಿ ನೇಮಿಚಂದ್ರದವರ ಸಾಹಿತ್ಯ ಕೃಷಿಯಲ್ಲಿ ಹಲವಾರು ವಿಷಯಗಳಿವೆ. ಆದರೆ ಸಂಶೋಧನಾ ಕಾರ್ಯಕ್ಕಾಗಿ ಸ್ತ್ರೀ ಸಂವೇದನೆಯ ಕುರಿತು ಮಾತ್ರ ಚರ್ಚಿಸಲಾಗಿದೆ. ಈ ಕೆಳಗಿನ ಕೆಲವು ವಿಷಯಗಳನ್ನಿಟ್ಟುಕೊಂಡು ಸಂಶೋಧನೆಯನ್ನು ಮುಂದುವರೆಸಬಹುದಾಗಿದೆ.

- ಕನ್ನಡ ಸಾಹಿತ್ಯ ಲೋಕದ ಲೇಖಕಿಯರಲ್ಲಿ ನೇಮಿಚಂದ್ರ ಅವರು ವೈಜ್ಞಾನಿಕ ಹಿನ್ನೆಲೆಯುಳ್ಳ ಬರಹಗಾರ್ತಿಯಾಗಿರುವುದರಿಂದ, ಅವರ ಹಾಗೆಯೇ ವೈಜ್ಞಾನಿಕ ಹಿನ್ನೆಲೆಯುಳ್ಳ ಲೇಖಕಿಯರ ಸಾಹಿತ್ಯದೊಂದಿಗೆ ತೌಲನಿಕ ಅಧ್ಯಯನ ಕೈಗೊಳ್ಳಬಹುದು.

- 'ನೇಮಿಚಂದ್ರರವರ ಕಥನ ಸಾಹಿತ್ಯ', 'ನೇಮಿಚಂದ್ರರವರ ಪ್ರವಾಸ ಸಾಹಿತ್ಯ' ಎಂಬ ವಿಷಯದ ಕುರಿತು ಪ್ರತ್ಯೇಕವಾಗಿ ಅಧ್ಯಯನ ಮಾಡುವ ಸಾಧ್ಯತೆಗಳಿವೆ.
- 'ನೇಮಿಚಂದ್ರ ಅವರ ಬರಹಗಳಲ್ಲಿ ವೈಜ್ಞಾನಿಕ ನೆಲೆ' ಎಂಬ ವಿಷಯದ ಕುರಿತು ಅಧ್ಯಯನ ಮಾಡಬಹುದಾಗಿದೆ.

ನೇಮಿಚಂದ್ರ ಅವರು ಸುಮಾರು ನಾಲ್ಕು ದಶಕಗಳಿಂದಲೂ ಕನ್ನಡ ಸಾಹಿತ್ಯಕ್ಕೆ ತಮ್ಮದೇ ಅದ ಕೊಡುಗೆಯನ್ನು ನೀಡುತ್ತಾ ಬಂದಿದ್ದಾರೆ. ಶಿಕ್ಷಣ ಮತ್ತು ಉದ್ಯೋಗ ಎರಡೂ ಕ್ಷೇತ್ರಗಳು ಮಹಿಳೆಯರಿಗೆ ಮುಕ್ತವಾಗಿಲ್ಲದ ಸಂದರ್ಭದಲ್ಲಿಯೂ ಅನೇಕ ಸವಾಲುಗಳನ್ನು ಎದುರಿಸಿ ಸಾಧನೆ ಮಾಡಿರುವುದು ಇವರ ಹಿರಿಮೆಯಾಗಿದೆ. ಓದುವ ಛಲ, ಜೀವನೋತ್ಸಾಹ, ಬದುಕಿನ ಬಗೆಗಿನ ಪ್ರೀತಿ ಇವರ ಹಾದಿಗೆ ಪ್ರೇರಣೆಯಾಗಿದೆ. ತಮ್ಮ ಸಾಹಿತ್ಯ ಮುಖೇನ ಮಧ್ಯಮ ವರ್ಗದ ಸಾಮಾಜಿಕ ಬದುಕನ್ನು ಕಟ್ಟಿಕೊಡುವ ಪ್ರತಿನಿಧಿಯಾಗಿ ನಮಗೆ ಅವರು ಕಾಣಸಿಗುತ್ತಾರೆ. ಯಾವುದೇ ತಾತ್ವಿಕ ಧೋರಣೆಯನ್ನು ಅನುಸರಿಸದೆ ಸ್ತ್ರೀವಾದ, ಮಾನವತಾವಾದವನ್ನೇ ಪಟ್ಟು ಹಿಡಿದು, ಸಾಮಾಜಿಕ ಬದಲಾವಣೆಗೆ ಅನುವಾಗುವಂತೆ ಸಾಹಿತ್ಯ ರಚಿಸಿರುವರು. ಯಾವುದೇ ಹಮ್ಮ-ಬಿಮ್ಮಗಳಿಲ್ಲದ ವ್ಯಕ್ತಿತ್ವ ಅವರದು.

ನೇಮಿಚಂದ್ರ ಅವರ ಸಾಹಿತ್ಯ ಸೇವೆ ಬಹುಮುಖ್ಯವಾಗಿದೆ. ವಿಭಿನ್ನ ಪ್ರಕಾರಗಳಲ್ಲಿ ಅಭಿವ್ಯಕ್ತಗೊಂಡಿರುವ ಇವರ ಸಾಹಿತ್ಯ ಓದುಗರಿಗೆ ಉತ್ತಮ ಸಂದೇಶಗಳನ್ನು ನೀಡುತ್ತದೆ. ಬದುಕನ್ನು ಅತ್ಯಂತ ಸ್ವೀಕೃತ ಭಾವದಿಂದ ಬದುಕುವ ಕಲೆಯನ್ನು ಕಲಿಸುತ್ತದೆ. ಕತೆಗಾರ್ತಿಯಾಗಿ, ಪ್ರವಾಸಿಯಾಗಿ, ಕಾದಂಬರಿಕಾರ್ತಿಯಾಗಿ, ಜೀವನ ಚರಿತ್ರೆಕಾರ್ತಿಯಾಗಿ, ಅಂಕಣ ಬರಹಗಾರಳಾಗಿ, ಸಂಪಾದಕರಾಗಿ ನೇಮಿಚಂದ್ರ ಅವರು ತಮ್ಮನ್ನು ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ಸಾಹಿತ್ಯ ಸಾಧನೆಗೆ ಅವರಲ್ಲಿರುವ ಶ್ರದ್ಧೆ, ಅಧ್ಯಯನಶೀಲತೆ, ಸದಾ ಚಟುವಟಿಕೆಯಿಂದಿರುವ ಅವರ ವ್ಯಕ್ತಿತ್ವವೆ ಕಾರಣವಾಗಿದೆ. ಸಾಹಿತ್ಯದಷ್ಟೇ ಸರಳ, ಸಾಮಾಜಿಕ ನಿಷ್ಠೆ ಮತ್ತು ವಸ್ತುನಿಷ್ಠತೆಯನ್ನು ಕಾಣಬಹುದಾಗಿದೆ.

ನೇಮಿಚಂದ್ರ ಅವರ ಸಾಹಿತ್ಯವನ್ನು ಅವಲೋಕಿಸಿದಾಗ ಅವರ ಸಾಹಿತ್ಯ ಪ್ರಸ್ತುತವೆನಿಸುತ್ತದೆ. ಆಧುನಿಕ ಸಾಹಿತ್ಯದ ಯಾವ ಕಾಲಘಟ್ಟಗಳೊಂದಿಗೂ ಅಂಟಿಕೊಳ್ಳದೆ ಸಾಹಿತ್ಯ ರಚನೆಯಲ್ಲಿ ತೊಡಗಿರುವವರು ಇವರಾಗಿದ್ದಾರೆ. ನಮ್ಮಲ್ಲೇ ಇರುವಂತಹ ಗಂಭೀರ ಸ್ವರೂಪದ ಸಮಸ್ಯೆಗಳಾದ ಸ್ತ್ರೀಶಿಕ್ಷಣ, ವೈವಾಹಿಕ ಜೀವನ, ಅಸಮಾನತೆ, ವೃತ್ತಿ ಸಂಘರ್ಷಗಳು, ಸಾಮಾಜಿಕ ಕಟ್ಟುಪಾಡುಗಳು

ಇವೇ ಮೊದಲಾದವುಗಳ ಪರಿಹಾರಕ್ಕೆ ಮಾರ್ಗೋಪಾಯಗಳನ್ನು ಇವರ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ತೀವ್ರತರದ ಪ್ರತಿಭಟನೆ, ಪ್ರತಿಕ್ರಿಯೆ ಇವರ ಸಾಹಿತ್ಯದಲ್ಲಿ ಕಾಣದಿದ್ದರೂ ಸಮಾನತೆಯ ಸೂಕ್ಷ್ಮ ನಿರೂಪಣೆ ಇಲ್ಲಿದೆ. ಹಾಗೆಂದ ಮಾತ್ರಕ್ಕೆ ಇವರ ಸಾಹಿತ್ಯದಲ್ಲಿ ಪ್ರತಿಭಟನೆಯೇ ಇಲ್ಲವೆಂದಲ್ಲ. ಪ್ರತಿಭಟನೆ ಅಗತ್ಯವೆನಿಸಿದಾಗ ವ್ಯಕ್ತವಾಗಿ, ನಂತರ ಉದ್ದೇಶದ ಪರಿಪೂರ್ಣತೆಯೆಡೆಗೆ ಸಾಗುತ್ತದೆ.

ಅನುಭವದಲ್ಲೇ ಉದಿಸಿದ ಅವರ ಸಾಹಿತ್ಯವು ಎಲ್ಲಾ ಓದುಗರಲ್ಲೂ ಅರಿವು ಮೂಡಿಸುತ್ತದೆ. ನೇಮಿಚಂದ್ರ ಅವರ ಸಾಹಿತ್ಯ ರಚನೆಯನ್ನು ವಿವಿಧ ರೀತಿಯಲ್ಲಿ ಚರ್ಚೆಗೆ ಒಳಪಡಿಸಿದ್ದರೂ ಸಹ ಅಪೂರ್ಣತೆ ಕಾಡುತ್ತಿದೆ. ಸಾಹಿತ್ಯ ರಚನೆಯಲ್ಲಿ ಇನ್ನೂ ತೊಡಗಿಸಿಕೊಂಡಿರುವ ನೇಮಿಚಂದ್ರ ಅವರು 'ತುಹಡೈನಾಲ್' ಹಾಗೂ 'ಬದುಕು ಮತ್ತು ಪಯಣ' ಪುಸ್ತಕಗಳ ಬರವಣಿಗೆಯ ಹಂತದಲ್ಲಿದ್ದು ಮುಂದೆ ಯಾರಾದರು ಅಧ್ಯಯನ ಮಾಡುವ ಸಾಧ್ಯತೆ ಇದೆ. ಉಳಿದಂತೆ ಅವರ ಸಾಹಿತ್ಯವನ್ನು ಸಮಗ್ರವಾಗಿ ಅಧ್ಯಯನಕ್ಕೆ ಒಳಪಡಿಸಿಲ್ಲ, ಗುರುತಿಸಿಲ್ಲ ಎಂಬ ಕೊರಗನ್ನು ಈ ಪ್ರಬಂಧ ಅಲ್ಪಮಟ್ಟಿಗಾದರೂ ನೀಗುತ್ತದೆ ಎಂಬ ವಿಶ್ವಾಸವಿದೆ. ಸ್ತ್ರೀವಾದಿಯಾಗಿ, ಪರಂಪರಾನುಗತವಾಗಿ ನಡೆದು ಬಂದ ಮಹಿಳೆಯರ ಬದುಕಿನ ಬವಣೆಗಳ ಬದಲಾವಣೆಗಾಗಿ ತುಡಿಯುವರು. ಸ್ತ್ರೀ ಶಿಕ್ಷಣಕ್ಕೆ, ಆರ್ಥಿಕ ಭದ್ರತೆಗೆ ಪ್ರಾಮುಖ್ಯತೆ ನೀಡಿದ್ದಾರೆ ಆದರೆ ಎಂದಿಗೂ ಪುರುಷ ವಿರೋಧಿಯಾದವರಲ್ಲ. ಎಷ್ಟೋ ಕೃತಿಗಳಲ್ಲಿ ಯಶಸ್ವಿ ಪುರುಷನ ಹಿಂದೆ ಮಹಿಳೆಯರು, ಹಾಗೆಯೇ ಯಶಸ್ವಿ ಮಹಿಳೆಯರ ಹಿಂದೆ ಪುರುಷರಿರುವುದರ ಸಮತೋಲಿತ ಮಾನವತಾವಾದವನ್ನು ಕಾಣಬಹುದು. ಇವರ ಕತೆಗಳಲ್ಲಿ ಮಧ್ಯಮವರ್ಗ, ನಗರ ಜೀವನ, ಹೊಂದಾಣಿಕೆಯ ದಾಂಪತ್ಯ ಜೀವನ ಹೀಗೆ ಹಲವು ಅಂಶವನ್ನು ಕಾಣಬಹುದಾಗಿದೆ. ಮಾನವನ ಬದುಕಿನ ನೈಜ ಪರಿಸ್ಥಿತಿಗಳನ್ನು ಕಟ್ಟಿಕೊಡುವಲ್ಲಿ ನೇಮಿಚಂದ್ರ ಅವರ ಬರವಣಿಗೆ ಪ್ರಮುಖವೆನಿಸುತ್ತದೆ. ಮಹಿಳೆಯರ ಅಸ್ತಿತ್ವದ ಹುಡುಕಾಟ, ಶೈಕ್ಷಣಿಕ ಮಹತ್ವ, ತಾಯ್ತನದ ಪರಿಕಲ್ಪನೆಗಳನ್ನು ಉತ್ತಮ ನೆಲೆಯಲ್ಲಿ ಗುರುತಿಸಿದ್ದಾರೆ. ಅನುಭವದ ಸಂಪನ್ನತೆಯನ್ನು ಇವರ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

ಆಕರಗಳು

(ಅ) ಪ್ರಾಥಮಿಕ ಆಕರಗಳು

1. ನೇಮಿಚಂದ್ರ ಮತ್ತು ಹೇಮಲತಾ ಮಹಿಷಿ (1996) ನ್ಯಾಯಕ್ಕಾಗಿ ಕಾದಿರುವ ಭಾಂವ್ರಿದೇವಿ. ಜಾಗೃತಿ ಮಹಿಳಾ ಪ್ರಕಾಶನ, ಬೆಂಗಳೂರು
2. ನೇಮಿಚಂದ್ರ (ಸಂ) (1988) ಬೆಳಗೆರೆ ಜಾನಕಮ್ಮ ಬದುಕು–ಬರಹ. ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು
3. ನೇಮಿಚಂದ್ರ (1999) ಒಂದು ಕನಸಿನ ಪಯಣ. ಧಾರವಾಡ ಮಹಿಳಾ ಸಾಹಿತ್ಯ, ನವನಗರ, ಹುಬ್ಬಳ್ಳಿ
4. ನೇಮಿಚಂದ್ರ (1999) ಬದುಕು ಬದಲಿಸಬಹುದು. ನವಕರ್ನಾಟಕ ಪ್ರಕಾಶನ, ಬೆಂಗಳೂರು. ಹದಿನಾಲ್ಕನೆಯ ಮುದ್ರಣ
5. ನೇಮಿಚಂದ್ರ (1999) ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್ ಪ್ರೊ. ಎಲ್.ಎಸ್. ಶೇಷಗಿರಿರಾವ್ (ಪ್ರ.ಸಂ.), ಸಪ್ನ ಬುಕ್ ಹೌಸ್. ಬೆಂಗಳೂರು
6. ನೇಮಿಚಂದ್ರ (2005) ಮಹಿಳಾ ಲೋಕ (ಸಂಪಾದಿತ), ನವಕರ್ನಾಟಕ ಪ್ರಕಾಶನ, ಬೆಂಗಳೂರು
7. ನೇಮಿಚಂದ್ರ (2007) ನೊಬೆಲ್ ಪ್ರಶಸ್ತಿ ವಿಜೇತ ಮಹಿಳಾ ವಿಜ್ಞಾನಿಗಳು. ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಸರಸ್ವತಿ ಗೋದಾಮ, ಗುಲ್ಬರ್ಗಾ, ಎರಡನೆಯ ಮುದ್ರಣ
8. ನೇಮಿಚಂದ್ರ (2010) ಬೆಳಕಿನೊಂದು ಕಿರಣ ಮೇರಿ ಕ್ಯೂರಿ. ಅಂಕಿತ ಪುಸ್ತಕ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
9. ನೇಮಿಚಂದ್ರ (2011) ನನ್ನ ಕಥೆ, ನಮ್ಮ ಕಥೆ. ಅಂಕಿತ ಪುಸ್ತಕ, ಬೆಂಗಳೂರು.
10. ನೇಮಿಚಂದ್ರ (2011) ಜೆನ್ ಗುಡಾಲ್ (ಸಂಪಾದಕರು ಡಾ॥ ನಾ. ಸೋಮೇಶ್ವರ) ನವಕರ್ನಾಟಕ ಪ್ರಕಾಶನ, ಬೆಂಗಳೂರು.
11. ನೇಮಿಚಂದ್ರ (2011) ಮಹಿಳಾ ಅಧ್ಯಯನ. ಅಂಕಿತ ಪುಸ್ತಕ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
12. ನೇಮಿಚಂದ್ರ (2012) ಇಲ್ಲಿಯವರೆಗಿನ ನೇಮಿಚಂದ್ರರ ಕತೆಗಳು. ಅಂಕಿತ ಪುಸ್ತಕ. ಬೆಂಗಳೂರು

13. ನೇಮಿಚಂದ್ರ (2015) ಯಾದ್ ವಶೇಮ್. ನವಕರ್ನಾಟಕ ಪ್ರಕಾಶನ, ಬೆಂಗಳೂರು. ನಾಲ್ಕನೆಯ ಮುದ್ರಣ
14. ನೇಮಿಚಂದ್ರ (2015) ಪೆರುವಿನ ಪವಿತ್ರ ಕಣಿವೆಯಲ್ಲಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು. ಆರನೆಯ ಮುದ್ರಣ
15. ನೇಮಿಚಂದ್ರ (2015) ಡಾ॥ ಈಡಾ ಸ್ಕಡರ್. (ಸಂಪಾದಕರು ಡಾ॥ ನಾ. ಸೋಮೇಶ್ವರ), ನವಕರ್ನಾಟಕ ಪ್ರಕಾಶನ, ಬೆಂಗಳೂರು.
16. ನೇಮಿಚಂದ್ರ (2015) ಮೊಹಮ್ಮದ್ ದಿಲಾವರ್. (ಸಂಪಾದಕರು ಡಾ॥ ನಾ. ಸೋಮೇಶ್ವರ), ನವಕರ್ನಾಟಕ ಪ್ರಕಾಶನ, ಬೆಂಗಳೂರು.
17. ನೇಮಿಚಂದ್ರ (2015) ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು. ನವಕರ್ನಾಟಕ ಪ್ರಕಾಶನ, ಬೆಂಗಳೂರು.
18. ನೇಮಿಚಂದ್ರ (2015) ಥಾಮಸ್ ಆಲ್ವಾ ಎಡಿಸನ್. (ಸಂಪಾದಕರು ಡಾ॥ ನಾ. ಸೋಮೇಶ್ವರ), ನವಕರ್ನಾಟಕ ಪ್ರಕಾಶನ, ಬೆಂಗಳೂರು.
19. ನೇಮಿಚಂದ್ರ (2015) ನೋವಿಗದ್ದಿದ ಕುಂಚ. ನವಕರ್ನಾಟಕ ಪ್ರಕಾಶನ, ಬೆಂಗಳೂರು.
20. ನೇಮಿಚಂದ್ರ (2016) ಸಾವೇ ಬರುವುದಿದ್ದರೆ ನಾಳೆ ಬಾ. ನವಕರ್ನಾಟಕ ಪ್ರಕಾಶನ, ಬೆಂಗಳೂರು. ನಾಲ್ಕನೆಯ ಮುದ್ರಣ
21. ನೇಮಿಚಂದ್ರ (2016) ಸೋಲೆಂಬುದು ಅಲ್ಪವಿರಾಮ. ನವಕರ್ನಾಟಕ ಪ್ರಕಾಶನ, ಬೆಂಗಳೂರು. ನಾಲ್ಕನೆಯ ಮುದ್ರಣ
22. ನೇಮಿಚಂದ್ರ (2017) ಕಾಲು ಹಾದಿಯ ಕೋಲ್ಮಿಂಚುಗಳು. ನವಕರ್ನಾಟಕ ಪ್ರಕಾಶನ, ಬೆಂಗಳೂರು. ಎರಡನೆಯ ಮುದ್ರಣ
23. ನೇಮಿಚಂದ್ರ (2018) ದುಡಿವ ಹಾದಿಯಲ್ಲಿ ಜೊತೆಯಾಗಿ. (ಸಂಪಾದಕರು ಡಾ॥ ಸಿ.ಆರ್. ಚಂದ್ರಶೇಖರ್ – ವ್ಯಕ್ತಿ ವಿಕಸನ ಮಾಲೆ), ನವಕರ್ನಾಟಕ ಪ್ರಕಾಶನ, ಬೆಂಗಳೂರು.
24. ನೇಮಿಚಂದ್ರ (2020) ಸಂತಸ, ನನ್ನೆದೆಯ ಹಾಡು ಹಕ್ಕಿ. ನವಕರ್ನಾಟಕ ಪ್ರಕಾಶನ, ಬೆಂಗಳೂರು.

(ಆ) ಪರಾಮರ್ಶನ ಗ್ರಂಥಗಳು (ಪುಸ್ತಕಗಳು)

1. ಅನಂತಮೂರ್ತಿ ಯು.ಆರ್ (2014) ಪ್ರಜ್ಞೆ ಮತ್ತು ಪರಿಸರ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
2. ಅನುಪಮಾ ನಿರಂಜನ (2004) ಅಂಗೈಯಲ್ಲಿ ಯೂರೋ ಅಮೇರಿಕ. ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು
3. ಅನುಪಮಾ ನಿರಂಜನ (2009) ಮಾಧವಿ. ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು
4. ಅನುಪಮಾ ನಿರಂಜನ (2007) ಬರಹಗಾರ್ತಿಯ ಬದುಕು. ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು
5. ಅನುರಾಧ ಬಿ.ಟಿ (2011) ಕನ್ನಡದಲ್ಲಿ ಪ್ರವಾಸ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
6. ಅಮೂರ ಜಿ. ಎಸ್. (1999) ಅರ್ಥಲೋಕ. ಪ್ರಿಯದರ್ಶಿನಿ ಪ್ರಕಾಶನ. ಬೆಂಗಳೂರು
7. ಆಮೂರ ಜಿ. ಎಸ್. (2012) ಕನ್ನಡ ಕಥನ ಸಾಹಿತ್ಯ. ಸಣ್ಣಕತೆ ಸ್ನೇಹಾ ಪ್ರಿಂಟರ್ಸ್ ಬೆಂಗಳೂರು
8. ಆಮೂರ ಜಿ. ಎಸ್ (1999) ಕನ್ನಡ ಕಥನ ಸಾಹಿತ್ಯ : ಸಣ್ಣಕತೆ. ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು
9. ಆಮೂರ ಜಿ. ಎಸ್. (2016) ಕನ್ನಡ ಕಥನ ಸಾಹಿತ್ಯ. ಸಪ್ನ ಬುಕ್ ಹೌಸ್, ಬೆಂಗಳೂರು
10. ಆರ್ಯಾಂಬ ಪಟ್ಟಾಭಿ (ಪ್ರ.ಸಂ) (2004) ಮಹಿಳಾ ಸಾಹಿತ್ಯ ಸಮೀಕ್ಷೆ. ಶ್ರೀ ರಾಜೇಂದ್ರ ಪ್ರಿಂಟರ್ಸ್ ಮತ್ತು ಪಬ್ಲಿಕೇಷನ್, ಮೈಸೂರು
11. ಎಚ್ಚೆಸ್ಕೆ (2003) ಅಂಕಣ ಬರಹ. ಅಂಕಿತ ಪುಸ್ತಕ. ಬೆಂಗಳೂರು
12. ಕೆಂಡಗಣ್ಣಸ್ವಾಮಿ ಬಿ. ಎಸ್. (2013) ನೇಮಿಚಂದ್ರ ಅವರ ಸಣ್ಣ ಕಥೆಗಳ ಒಂದು ಅಧ್ಯಯನ. ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
13. ಕೀರ್ತಿನಾಥ ಕುರ್ತಕೋಟಿ (2010) ಯುಗಧರ್ಮ ಮತ್ತು ಸಾಹಿತ್ಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
14. ಕೇಶವಶರ್ಮ ಕೆ. (2010) ಸ್ತ್ರೀವಾದಿ. ಆಖ್ಯಾನ ನಾಗಾರ್ಜುನ ಪ್ರಿಂಟರ್ಸ್, ತರೀಕೆರೆ

15. ಕೋದಂಡರಾಮ ಎನ್. ಕೆ. (2008) ಕನ್ನಡ ಕಥನ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ. ಅಹರ್ನಿಶಿ ಪ್ರಕಾಶನ, ಬೆಂಗಳೂರು
16. ಜವರೇಗೌಡ ದೇ. (1998) ಜೀವನ ಚರಿತ್ರೆ ಮತ್ತು ಇತರೆ ಪ್ರಬಂಧಗಳು (ಅನುವಾದ) ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು
17. ಜ್ಯೋತಿ ಶಶಿಕುಮಾರ್ (2010) ಮಹಿಳಾ ಸಾಮಾಜಿಕತೆ. ವಿಸ್ಮಯ ಪ್ರಕಾಶನ, ಮೈಸೂರು
18. ನಾಗರಾಜ್, ಡಿ. ಅರ್. (1996) ಸಾಹಿತ್ಯ ಕಥನ. ಅಕ್ಷರ ಪ್ರಕಾಶನ, ಸಾಗರ
19. ನಾಗೇಗೌಡ ಎಚ್. ಎಲ್. (1983) ಪ್ರವಾಸಿ ಕಂಡ ಇಂಡಿಯಾ ಸಂಪುಟ (1–5) ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
20. ನಾಗತಿಹಳ್ಳಿ ಚಂದ್ರಶೇಖರ್ (2004) ದಕ್ಷಿಣ ಧ್ರುವದಿಂ. ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ, ಬೆಂಗಳೂರು
21. ನಾಗೇಶ್ ಹೆಚ್.ವಿ (1990) ಪ್ರಬಂಧ ಪ್ರಪಂಚ ಸಂ. ರಾ ಯ ಧಾರವಾಡಕರ ಸನ್ಮಾನ ಸಮಿತಿ, ಬಾಗಲಕೋಟೆ
22. ದೊಡೇಗೌಡ ಬಿ. ಸಿ. (2021) ಕನ್ನಡದಲ್ಲಿ ಅಂಕಣ ಸಾಹಿತ್ಯ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
23. ತೇಜಸ್ವಿನಿ ನಿರಂಜನ ಮತ್ತು ಸಿಮಂತಿನಿ ನಿರಂಜನ (ಸಂ) (2014) ಸ್ತ್ರೀವಾದಿ ಸಾಹಿತ್ಯ ವಿಮರ್ಶೆ. ಅಭಿನವ ಪ್ರಕಾಶನ. ಬೆಂಗಳೂರು
24. ಪರಮೇಶ್ವರ ಭಟ್ಟ ವಿ. ಎಸ್. (1971) ಕನ್ನಡದಲ್ಲಿ ಜೀವನ ಚರಿತ್ರೆ. ಉಷಾ ಸಾಹಿತ್ಯ ಮಾಲೆ, ಮೈಸೂರು
25. ಬರಗೂರು ರಾಮಚಂದ್ರಪ್ಪ (2006) ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ
26. ಸ್ವರೂಪ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
27. ಮಲ್ಲೇಪುರಂ ಜಿ. ವೆಂಕಟೇಶ್ (1992) ಪ್ರವಾಸ ಸಾಹಿತ್ಯ. ಹೊನ್ನ ಪ್ರಕಾಶನ, ಬೆಂಗಳೂರು
28. ಮುನಿಶಾಮಪ್ಪ, ಎ. (2009) ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ. ಕಾಲ ಪ್ರಕಾಶನ, ಬೆಂಗಳೂರು
29. ರಾಮಚಂದ್ರನ್ ಸಿ. ಎನ್. (2008) ಸಾಹಿತ್ಯ ವಿಮರ್ಶೆ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

30. ಲತಾ ಗುತ್ತಿ (2007) ಪ್ರವಾಸ ಸಾಹಿತ್ಯದ ವಿಶ್ವ ಸಂಸ್ಕೃತಿಗಳು. ಸಚ್ಚಿನ್ ಪಬ್ಲಿಷರ್ಸ್, ಹಂಪಿನಗರ, ವಿಜಯನಗರ ಬೆಂಗಳೂರು
31. ವೈದೇಹಿ (1990) ಆಯ್ದ ಕಥೆಗಳು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
32. ವಿದ್ಯಾಶಂಕರ್ ಎಸ್. (2006) ಪ್ರವಾಸೋದ್ಯಮ ಹಾಗೂ ಕನ್ನಡದಲ್ಲಿ ಪ್ರವಾಸ ಸಾಹಿತ್ಯ. ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಭವನ, ಬೆಂಗಳೂರು
33. ಸೀತಾರಾಮಯ್ಯ ಎಂ.ವಿ. (1993) ಕನ್ನಡ ಜೀವನ ಚರಿತ್ರೆ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
34. ಸುರೇಂದ್ರ ಕುಮಾರ ಕೆರಮಗಿ (2012) ಕನ್ನಡದಲ್ಲಿ ಅಂಕಣ ಸಾಹಿತ್ಯ. ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾನಿಲಯ, ಗುಲ್ಬರ್ಗಾ.
35. ಶ್ರೀಮತಿ ಎಚ್. ಎಸ್. (2019) ಸ್ತ್ರೀವಾದ ಚಿಂತನೆ ಮತ್ತು ಹೋರಾಟ. ಅಭಿರುಚಿ ಪ್ರಕಾಶನ. ಮೈಸೂರು

ಸುಚಿತ್ರ ಕೆ. ಎಲ್.	ಡಾ. ಧನಂಜಯ
ಸಂಶೋಧಕರು	ಮಾರ್ಗದರ್ಶಕರು